# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ದಾವಣಗೆರೆ
ಗುರುವಾರ, ಡಿಸೆಂಬರ್ 16, 2021

ಸಂಪುಟ : 48 ಸಂಚಿಕೆ : 215 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 4 ರೂ : 4.00 www.janathavani.com janathavani@mac.com




## ನಾಮಫಲಕದಲ್ಲಿ ಕನ್ನಡಕ್ಕೆ ಆದ್ಯತೆ ನೀಡದಿದ್ದರೆ ಪರವಾನಗಿ ರದ್ದು

**ಅಂಗಡಿ-ಮುಂಗಟ್ಟುಗಳ ಮಾಲೀಕರಿಗೆ ಪಾಲಿಕೆ ಮೇಯರ್ ಎಸ್.ಟಿ. ವೀರೇಶ್ ಎಚ್ಚರಿಕೆ**

ದಾವಣಗೆರೆ, ಡಿ.15- ಕನ್ನಡದಲ್ಲಿ ನಾಮಫಲಕಗಳ ಬಳಕೆಗೆ ಹೆಚ್ಚಿನ ಆದ್ಯತೆ ನೀಡಬೇಕು ಎಂದು ರಾಜ್ಯ ಸರ್ಕಾರ ಆದೇಶಿಸಿದ್ದು, ನಗರದಲ್ಲಿ ಈ ಆದೇಶ ಪಾಲಿಸದ ಅಂಗಡಿ-ಮುಂಗಟ್ಟುಗಳನ್ನು ಪಾಲಿಕೆ ಅಧಿಕಾರಿಗಳ ತಂಡದೊಂದಿಗೆ ಮೇಯರ್ ಎಸ್.ಟಿ. ವೀರೇಶ್ ಇಂದು ಪರಿಶೀಲಿಸಿ, ಕನ್ನಡದ ನಾಮಫಲಕಗಳ ಬಗ್ಗೆ ಜಾಗೃತಿ ಅಭಿಯಾನ ನಡೆಸಿದರು.

ಈಗಾಗಲೇ ಅಳವಡಿಸಲಾಗಿರುವ ನಾಮಫಲಕಗಳನ್ನು ವಾರದೊಳಗಾಗಿ ಬದಲಿಸಿಕೊಂಡು ಆದೇಶ ಪಾಲಿಸದಿದ್ದರೆ ದಂಡ ಸಹಿತ ಉದ್ದಿಮೆ ಪರವಾನಿಗೆ ರದ್ದುಪಡಿಸುವುದೂ ಸೇರಿದಂತೆ ಕಾನೂನು ಕ್ರಮ ಜರುಗಿಸುವುದಾಗಿಯೂ ಅಂಗಡಿ-ಮುಂಗಟ್ಟುಗಳ ಮಾಲೀಕರಿಗೆ ಎಚ್ಚರಿಕೆಯನ್ನೂ ನೀಡಿದರು.

ಮಂಡಿಪೇಟೆಯಲ್ಲಿ ನಗರ ಪಾಲಿಕೆ ಸದಸ್ಯರು ಮತ್ತು ಅಧಿಕಾರಿಗಳ ತಂಡದೊಂದಿಗೆ ಕನ್ನಡ ನಾಮಫಲಕ ಅಳವಡಿಕೆಯ ಜಾಗೃತಿ ಮೂಡಿಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಮೇಯರ್ ವೀರೇಶ್, ಅಂಗಡಿ, ಮುಂಗಟ್ಟುಗಳ ನಾಮಫಲಕದಲ್ಲಿ ಕಡ್ಡಾಯವಾಗಿ ಶೇ.70 ರಷ್ಟು ಗಾತ್ರದಲ್ಲಿ ಕನ್ನಡ ಅಕ್ಷರ ಮತ್ತು ಶೇ.30 ರಷ್ಟು ಗಾತ್ರದಲ್ಲಿ ಅನ್ಯಭಾಷೆಯ ಅಕ್ಷರಗಳು ಇರಬೇಕು ಎಂದು ರಾಜ್ಯ ಸರ್ಕಾರ ಆದೇಶಿಸಿದೆ. ಈ ಆದೇಶ ಪಾಲಿಸದಿದ್ದರೆ ದಂಡ, ನಾಮಫಲಕ ತೆರವು ಅಷ್ಟೇ ಅಲ್ಲದೇ ಉದ್ದಿಮೆ ಪರವಾನಿಗೆ ರದ್ದು ಪಡಿಸುವುದು ಸೇರಿದಂತೆ, ಕಾನೂನು ಕ್ರಮ ಜರುಗಿಸಲಾಗುವುದು ಎಂದು ಮುನ್ನೆಚ್ಚರಿಸಿದರು.

ನಾಳೆ ಗುರುವಾರದಿಂದ ನಗರ ಪಾಲಿಕೆ ಆರೋಗ್ಯ ಅಧಿಕಾರಿಗಳ ತಂಡ ನಗರದಲ್ಲೆಲ್ಲಾ (3ನೇ ಪುಟಕ್ಕೆ)

# 15 ವಿಪ ಸದಸ್ಯರ ದಿನದ ಅಮಾನತ್ತು

## ಸಚಿವ ಭೈರತಿ ಬಸವರಾಜ್, ಮಾಜಿ ಸಚಿವ ಶಂಕರ್ ವಿರುದ್ಧ ಕ್ರಿಮಿನಲ್ ಪ್ರಕರಣ ಕುರಿತ ಚರ್ಚೆಗೆ ಅವಕಾಶ ಸಿಗದ ಹಿನ್ನೆಲೆ, ಸದನದಲ್ಲಿ ಸದಸ್ಯರ ಗದ್ದಲ-ಕೋಲಾಹಲ

ಬೆಂಗಳೂರು, ಡಿ. 15 - ಹಾಲಿ ಸಚಿವ ಹಾಗೂ ಮಾಜಿ ಸಚಿವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸಲು ನ್ಯಾಯಾಲಯ ಸೂಚಿಸಿರುವ ಕುರಿತು ಚರ್ಚೆಗೆ ಅವಕಾಶ ನೀಡಬೇಕೆಂದು ಕಾಂಗ್ರೆಸ್ ಕೋರಿದ ನಿಲುವಳಿಯನ್ನು ಸರ್ಕಾರ ತಿರಸ್ಕರಿಸಿದ್ದು, ಇಂದು ವಿಧಾನ ಪರಿಷತ್ತಿನಲ್ಲಿ ಕೋಲಾಹಲಕ್ಕೆ ಎಡೆಮಾಡಿಕೊಟ್ಟು, ಆ ಪಕ್ಷದ 15 ಸದಸ್ಯರು ಒಂದು ದಿನದ ಮಟ್ಟಿಗೆ ಅಮಾನತ್ತುಗೊಂಡ ಘಟನೆ ನಡೆಯಿತು.

ಸಚಿವ ಭೈರತಿ ಬಸವರಾಜ ಹಾಗೂ ಮಾಜಿ ಸಚಿವ ಶಂಕರ್ ಅವರ ವಿರುದ್ಧದ ಜಮೀನು ಪ್ರಕರಣಕ್ಕೆ ಸಂಬಂಧಿಸಿದಂತೆ ಸದನದಲ್ಲಿ ಗದ್ದಲ ನಡೆಸಿದ 15 ಪರಿಷತ್ ಸದಸ್ಯರನ್ನು ಅಮಾನತ್ತು ಮಾಡಲಾಗಿದೆ. ವಿಷಯದ ಬಗ್ಗೆ ಚರ್ಚೆಗೆ ಅವಕಾಶ ನೀಡುವಂತೆ ಒತ್ತಾಯಿಸಿ, ಕಾಂಗ್ರೆಸ್ ಸದಸ್ಯರು ವಿಧಾನ ಪರಿಷತ್‌ನಲ್ಲಿ ಪಟ್ಟುಹಿಡಿದಿದ್ದರು. ಆದರೆ, ಪ್ರಕರಣ ಕೋರ್ಟ್‌ನಲ್ಲಿ ವಿಚಾರಣೆ ನಡೆಯುತ್ತಿರುವ ಹಿನ್ನೆಲೆಯಲ್ಲಿ ಸದನದಲ್ಲಿ ಚರ್ಚೆಗೆ ಅವಕಾಶ ನೀಡದಂತೆ ಬಿಜೆಪಿ ಸದಸ್ಯರು ಒತ್ತಾಯಿಸಿದ್ದರು. ಈ ಬಗ್ಗೆ ಸದನದಲ್ಲಿ ಒಂದು ಗಂಟೆಗಳ ಕಾಲ ಚರ್ಚೆ ನಡೆದಿದೆ.

ಆದರೆ, ಇನ್ನು ಚರ್ಚೆಗೆ ಅವಕಾಶ ನೀಡಬೇಕೆಂದು ಹಾಗೂ ಸಚಿವ ಭೈರತಿ ಬಸವರಾಜ್ ರಾಜೀನಾಮೆಗೆ ಆಗ್ರಹಿಸಿ ಪ್ರತಿಭಟನೆ ನಡೆಸಿದ್ದಾರೆ. ಸಭಾಪತಿ ಬಸವರಾಜ ಹೊರಟ್ಟಿ ಎಷ್ಟೇ ಹೇಳಿದರೂ ಕೇಳದ ಕಾಂಗ್ರೆಸ್ ಸದಸ್ಯರು ಸದನದ ಬಾವಿಗಿಳಿದು ಪ್ರತಿಭಟನೆ ನಡೆಸಿದ್ದಾರೆ. ಈ ಕಾರಣದಿಂದ ಕೋಪಗೊಂಡ ಸಭಾಪತಿ ಬಸವರಾಜ ಹೊರಟ್ಟಿ, ಕಾಂಗ್ರೆಸ್‌ನ 15 ಸದಸ್ಯರನ್ನು ಒಂದು ದಿನದ ಮಟ್ಟಿಗೆ ಅಮಾನತ್ತುಗೊಳಿಸಿ ಆದೇಶ ಹೊರಡಿಸಿದ್ದಾರೆ.

**ಚರ್ಚೆಗೆ ಮತ್ತಷ್ಟು ಅವಕಾಶ ನೀಡಬೇಕೆಂದು ಹಾಗೂ ಸಚಿವ ಭೈರತಿ ಬಸವರಾಜ್ ರಾಜೀನಾಮೆಗೆ ಆಗ್ರಹಿಸಿ ಪ್ರತಿಭಟನೆ ನಡೆಸಿದ ಕಾಂಗ್ರೆಸ್ ಸದಸ್ಯರು.**

**ಸಭಾಪತಿ ಬಸವರಾಜ ಹೊರಟ್ಟಿ ಅವರ ಮನವಿಗೂ ಸ್ಪಂದಿಸದೆ ಬಾವಿಗಿಳಿದು ಪ್ರತಿಭಟನೆ.**

**ಕೋಪಗೊಂಡ ಸಭಾಪತಿಯಿಂದ 15 ಸದಸ್ಯರನ್ನು ಒಂದು ದಿನದ ಮಟ್ಟಿಗೆ ಅಮಾನತ್ತುಗೊಳಿಸಿ ಆದೇಶ**

ನಿಲುವಳಿ ಸೂಚನೆ ತಿರಸ್ಕರಿಸಿರುವುದನ್ನು ಒಪ್ಪದೇ ಸಭಾಪತಿ ಪೀಠದ ಮುಂದಿನ ಬಾವಿಗಿಳಿದು ಧರಣಿ ಮಾಡುತ್ತಿದ್ದ ಪ್ರತಿಪಕ್ಷದ ನಾಯಕ ಎಸ್.ಆರ್. ಪಾಟೀಲ್ ಸೇರಿದಂತೆ, ಕಾಂಗ್ರೆಸ್‌ನ 15 ಜನ ಸದಸ್ಯರು ಅಮಾನತ್ತುಗೊಂಡಿದ್ದಾರೆ.

ಸಭಾಪತಿ ಬಸವರಾಜ್ ಹೊರಟ್ಟಿ ಅವರು ನಿಲುವಳಿ ಸೂಚನೆ ತಿರಸ್ಕರಿಸಿ, ಧರಣಿ ಕೈಬಿಡುವಂತೆ ಕೋರಿದರು. ಆಗಲೂ ಮಣಿಯದೇ ಧರಣಿ ನಡೆಸಿದಾಗ ತಮ್ಮ ಆದೇಶವನ್ನು ಉಲ್ಲಂಘಿಸಿದ ಸದಸ್ಯರನ್ನು ಒಂದು ದಿನದ ಮಟ್ಟಿಗೆ ಸದನದಿಂದ ಹೊರಹಾಕಿರುವುದಾಗಿ ಪ್ರಕಟಿಸಿದರು.

ಆದರೂ ಕಾಂಗ್ರೆಸ್ ಸದಸ್ಯರು ಪಟ್ಟುಬಿಡದೆ ಧರಣಿ ಮುಂದುವರೆಸಿದರು. ಆಗ ಸಭಾಪತಿ ಪೀಠದಲ್ಲಿದ್ದ ತೇಜಸ್ವಿನಿಗೌಡ ಅವರು, ಈ ಸದಸ್ಯರನ್ನು ಅಮಾನತ್ತುಗೊಳಿಸುವುದಾಗಿ ಪ್ರಕಟಿಸಿದರು.

ಅಮಾನತ್ತುಪಡಿಸಿರುವ ವಿರೋಧ ಪಕ್ಷ ನಾಯಕ ಎಸ್.ಆರ್. ಪಾಟೀಲ್, ಪಿ.ಆರ್. ರಮೇಶ್, ನಾರಾಯಣಸ್ವಾಮಿ, ಬಿ.ಕೆ. ಹರಿಪ್ರಸಾದ್, ಪ್ರತಾಪ್‌ಚಂದ್ರ ಶೆಟ್ಟಿ, ಯು.ಬಿ. ವೆಂಕಟೇಶ್, ವೀಣಾ ಅಚ್ಚಯ್ಯ, ಸಿ.ಎಂ. ಇಬ್ರಾಹಿಂ ಸೇರಿದಂತೆ 15 ಕಾಂಗ್ರೆಸ್ ಸದಸ್ಯರನ್ನು ಉಲ್ಲೇಖಿಸಿ, ಅಮಾನತ್ತುಗೊಳಿಸಲಾಗಿದೆ ಎಂದು ಪ್ರಕಟಿಸಿ, ಹೊರ ಹೋಗುವಂತೆ ಸೂಚಿಸಿದರು.

ಅಮಾನತ್ತುಗೊಂಡವರು ಹೊರ ಹೋಗುವಂತೆ ಪದೇ ಪದೇ ಸಭಾಧ್ಯಕ್ಷರು ಸೂಚಿಸಿದರೂ ಕಾಂಗ್ರೆಸ್ ಸದಸ್ಯರು ಮಣಿಯದೇ ಧರಣಿ ಮುಂದುವರಿಸಿ, ಘೋಷಣೆ ಕೂಗುತ್ತಿದ್ದರು. ಈ ಸಂದರ್ಭದಲ್ಲಿ ಸದನದ ಯಾವ ಕಲಾಪವೂ ನಡೆಯಲಿಲ್ಲ. ಆಗ ಸಭಾಪತಿ ಪೀಠಕ್ಕೆ ಆಗಮಿಸಿದ (3ನೇ ಪುಟಕ್ಕೆ)

## ಜಿಲ್ಲಾ ಪಂಚಮಸಾಲಿ ಸಮಾಜದ ಅಧ್ಯಕ್ಷರಾಗಿ ಉಮಾಪತಿ ಪುನರಾಯ್ಕೆ

### ಸಮಾಜದ ರಾಜ್ಯ ಸಂಘದ ಸದಸ್ಯರಾಗಿ ಬಿ. ಲೋಕೇಶ್





ದಾವಣಗೆರೆ, ಡಿ.15 - ದಾವಣಗೆರೆ ಜಿಲ್ಲಾ ವೀರಶೈವ ಲಿಂಗಾಯತ ಪಂಚಮಸಾಲಿ ಸಮಾಜದ ಅಧ್ಯಕ್ಷರಾಗಿ ನಗರದ ಜವಳಿ ಉದ್ಯಮಿ ಬಿ.ಸಿ. ಉಮಾಪತಿ ಅವರು ಮತ್ತೊಂದು ಅವಧಿಗೆ ಪುನರಾಯ್ಕೆಗೊಂಡಿದ್ದಾರೆ.

ಕರ್ನಾಟಕ ರಾಜ್ಯ ವೀರಶೈವ ಲಿಂಗಾಯತ ಪಂಚಮಸಾಲಿ ಸಂಘದ 2021-22 ರಿಂದ 2025-26 ನೇ ಸಾಲಿಗೆ ದಾವಣಗೆರೆ ಪಂಚಮಸಾಲಿ ಜಿಲ್ಲಾ ಸಮಿತಿಗೆ ಸಮಾಜದ ಜಿಲ್ಲಾ ಕಚೇರಿಯಲ್ಲಿ ಇಂದು ನಡೆದ ಚುನಾವಣೆಯಲ್ಲಿ ಉಮಾಪತಿ ಅವರೂ ಸೇರಿದಂತೆ, 21 ಜನರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಜಿಲ್ಲಾ ಗೌರವಾಧ್ಯಕ್ಷರಾಗಿ ಪಂಚಾಕ್ಷರಪ್ಪ (ನ್ಯಾಮತಿ), (2ನೇ ಪುಟಕ್ಕೆ)

## ವಿಶ್ವಕರ್ಮ ಸಮಾಜದ ಶ್ರೀ ಸ್ವಾಮಿ ಶಿವಾತ್ಮಾನಂದ ಸರಸ್ವತಿ ಸ್ವಾಮೀಜಿ ಇನ್ನಿಲ್ಲ



ದಾವಣಗೆರೆ, ಡಿ.15- ಬೆಂಗಳೂರಿನಲ್ಲಿ ಮೊನ್ನೆ ಸಂಜೆ ನಡೆದ ರಸ್ತೆ ಅಪಘಾತದಲ್ಲಿ ಚಿಕ್ಕಬಳ್ಳಾಪುರ ಜಿಲ್ಲೆಯ ನಂದಿ ಗ್ರಾಮದ ಶ್ರೀ ಜ್ಞಾನಾನಂದ ಆಶ್ರಮದ ಶ್ರೀ ಸ್ವಾಮಿ ಶಿವಾತ್ಮಾನಂದ ಸರಸ್ವತಿ ಸ್ವಾಮೀಜಿ ನಿಧನರಾದರು.

ಮೋಟಾರ್ ಸೈಕಲ್‌ನಲ್ಲಿ ಹೋಗುತ್ತಿದ್ದ ಸಂದರ್ಭದಲ್ಲಿ ವಾಹನವೊಂದು ಅಪ್ಪಳಿಸಿದ ಪರಿಣಾಮ, ಗಾಯಗೊಂಡಿದ್ದ ಶ್ರೀ ಸ್ವಾಮಿ ಶಿವಾತ್ಮಾನಂದ ಸರಸ್ವತಿ ಸ್ವಾಮೀಜಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಫಲಕಾರಿಯಾಗದೇ ಇಂದು ಮಧ್ಯಾಹ್ನ ಕೊನೆಯುಸಿರೆಳೆದರು.

ಶ್ರೀಗಳವರ ಅಂತಿಮ ದರ್ಶನಕ್ಕಾಗಿ ಮೃತರ ಪಾರ್ಥಿವ (3ನೇ ಪುಟಕ್ಕೆ)

## ಅಭಿವೃದ್ಧಿ ನಿಲ್ಲಿಸಿ, ರೈತರಿಗೆ ನೆರವಾಗಿ



ಬೆಂಗಳೂರು, ಡಿ. 15 - ತಾತ್ಕಾಲಿಕವಾಗಿ ಅಭಿವೃದ್ಧಿ ಕೆಲಸ ನಿಲ್ಲಿಸಿ, ಅತಿವೃಷ್ಟಿಗೆ ಸಿಲುಕಿ ನಲುಗಿರುವ ರೈತನಿಗೆ ನೆರವಾಗಿ ಎಂದು ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ವಿಧಾನಸಭೆಯಲ್ಲಿ ಸರ್ಕಾರವನ್ನು ಆಗ್ರಹಿಸಿದ್ದಾರೆ.

ಇತಿಹಾಸದ ಪುಟದಲ್ಲೇ ರಾಜ್ಯದಲ್ಲಿ ಅಕಾಲಿಕ ಮಳೆ ಬಿದ್ದು, ಕೊಯ್ಲಿಗೆ ಬಂದ ಬೆಳೆ ಕಳೆದುಕೊಂಡು ರೈತ ಬೀದಿಗೆ ಬಿದ್ದಿದ್ದಾನೆ. ರೈತರ ಕಣ್ಣೊರೆಸಿ, ಹಸಿವನ್ನು ನೀಗಿಸಲು ಮೊದಲ ಆದ್ಯತೆ ಕೊಡಿ. ನಿಮ್ಮ ಎಲ್ಲ ಅಭಿವೃದ್ಧಿ ಕಾರ್ಯಗಳನ್ನು ಬದಿಗಿಡಿ ಎಂದು ಮುಖ್ಯಮಂತ್ರಿ ಮತ್ತು ಕಂದಾಯ ಸಚಿವರಿಗೆ ಸಲಹೆ ಮಾಡಿದ್ದಾರೆ. ಅತಿವೃಷ್ಟಿ, ಅನಾವೃಷ್ಟಿಗೆ ಸಂಬಂಧಿಸಿದಂತೆ ಚರ್ಚೆ ನಡೆಯುವ ಸಂದರ್ಭದಲ್ಲಿ ಮಧ್ಯ ಪ್ರವೇಶಿಸಿದ ಯಡಿಯೂರಪ್ಪ, ಅಕಾಲಿಕ ಮಳೆಯಿಂದ ಹಾನಿಗೀಡಾದ ರೈತನ ಬದುಕನ್ನು ಅಲ್ಪ ಸಮಯದಲ್ಲೇ ಎಳೆ ಎಳೆಯಾಗಿ ಬಿಡಿಸಿಟ್ಟರು.

ಕೇಂದ್ರದ ನೆರವಿಗೆ ಕಾಯಬೇಡಿ, ಮೊದಲು ಖಜಾನೆಯಲ್ಲಿರುವ ಹಣವನ್ನು ಪರಿಹಾರವಾಗಿ ನೀಡಿ, ಅವರನ್ನು ಬದುಕಿಸುವ ಕೆಲಸ ಮಾಡಿ. ಕೇಂದ್ರದಿಂದ ಹಣ ಬಂದೇ ಬರುತ್ತದೆ. ಅಲ್ಲಿಂದ (3ನೇ ಪುಟಕ್ಕೆ)

## ಪರಿಷತ್ : ಬಿಜೆಪಿ ವರಿಷ್ಠರ ಅಸಮಾಧಾನ

**ರಾಜ್ಯ ಘಟಕದಿಂದ ವರದಿಗೆ ಸೂಚನೆ**

ಬೆಂಗಳೂರು, ಡಿ. 15 - ಸ್ಥಳೀಯ ಸಂಸ್ಥೆಗಳಿಂದ ವಿಧಾನ ಪರಿಷತ್ತಿನ 25 ಸ್ಥಾನಗಳಿಗೆ ನಡೆದ ಚುನಾವಣಾ ಫಲಿತಾಂಶದ ಬಗ್ಗೆ ಅಸಮಾಧಾನಗೊಂಡಿರುವ ಕೇಂದ್ರ ಬಿಜೆಪಿ ವರಿಷ್ಠರು, ರಾಜ್ಯ ಘಟಕದಿಂದ ಫಲಿತಾಂಶದ ಬಗ್ಗೆ ಮಾಹಿತಿ ಕೇಳಿದ್ದಾರೆ.

ಫಲಿತಾಂಶಕ್ಕೂ ಮುನ್ನ ರಾಜ್ಯ ಘಟಕ ನೀಡಿರುವ ವರದಿಗೂ ಮತ ಎಣಿಕೆ ನಂತರ ಬಂದಿರುವ ಫಲಿತಾಂಶಕ್ಕೂ ಬಾರಿ ವ್ಯತ್ಯಾಸವಿದೆ. ನಿರ್ದಿಷ್ಟ ಗುರಿಯನ್ನು ಮುಟ್ಟಲು ಏತಕ್ಕೆ ವಿಫಲರಾಗಿದ್ದೀರಿ. ಕಾಂಗ್ರೆಸ್ ತನ್ನ ಸಾಮರ್ಥ್ಯ ಹೆಚ್ಚಿಸಲು ಕಾರಣ ಏನು ಎಂಬುದರ ಬಗ್ಗೆ ಮಾಹಿತಿ ನೀಡುವಂತೆ ತಿಳಿಸಿದೆ ಎಂದು (2ನೇ ಪುಟಕ್ಕೆ)

## ಇಂದು, ನಾಳೆ ಬ್ಯಾಂಕ್ ಮುಷ್ಕರ

ಸಾರ್ವಜನಿಕ ವಲಯದ ಬ್ಯಾಂಕುಗಳ ಖಾಸಗೀಕರಣ ವಿರೋಧಿಸಿ ಬ್ಯಾಂಕ್ ಕಾರ್ಮಿಕ ಸಂಘಟನೆಗಳ ಸಂಯುಕ್ತ ವೇದಿಕೆಯು ಇಂದು ಮತ್ತು ನಾಳೆ (ಡಿಸೆಂಬರ್ 16 ಮತ್ತು 17, ರಂದು) ಎರಡು ದಿನಗಳ ಕಾಲ ಅಖಿಲ ಭಾರತ ಬ್ಯಾಂಕ್ ಮುಷ್ಕರಕ್ಕೆ ಕರೆ ನೀಡಿದೆ. ದೇಶದಾದ್ಯಂತ 10 ಲಕ್ಷ ನೌಕರರು ಮುಷ್ಕರದಲ್ಲಿ ಭಾಗವಹಿಸಲಿದ್ದಾರೆ.

ಮುಷ್ಕರದ ಅಂಗವಾಗಿ ನಗರದಲ್ಲಿ ಗುರುವಾರ ಮತ್ತು ಶುಕ್ರವಾರ ಬೆಳಿಗ್ಗೆ 11ಗಂಟೆಗೆ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಮಂಡಿಪೇಟೆ ಶಾಖೆ ಮತ್ತು ಕೆನರಾ ಬ್ಯಾಂಕ್ ಮಂಡಿಪೇಟೆ ಶಾಖೆ ಮುಂಭಾಗದಲ್ಲಿ, ಮತ ಪ್ರದರ್ಶನ, ಪ್ರತಿಭಟನೆ, ಘೋಷಣೆ ಮತ್ತು ಮುಷ್ಕರ ನಡೆಸಲಾಗುವುದು. (3ನೇ ಪುಟಕ್ಕೆ)

## ಬಿಸಿಸಿಐ ವಿರುದ್ಧ ಕೊಹ್ಲಿ ನಡೆ

**ನಾಯಕತ್ವದ ಕುರಿತು ಗಂಗೂಲಿ ಹೇಳಿಕೆ ತಳ್ಳಿ ಹಾಕಿದ ನಾಯಕ**

ನವದೆಹಲಿ, ಡಿ. 15 – ಟಿ20 ನಾಯಕತ್ವ ಬಿಡದಂತೆ ತಮ್ಮ ಮನವೊಲಿಕೆಗೆ ಬಿಸಿಸಿಐ ಪ್ರಯತ್ನ ನಡೆಸಿತ್ತು ಎಂದು ಮಂಡಳಿ ಹೇಳಿರುವುದನ್ನು ಟೆಸ್ಟ್ ಕ್ರಿಕೆಟ್ ತಂಡದ ನಾಯಕ ವಿರಾಟ್ ಕೊಹ್ಲಿ ತಳ್ಳಿ ಹಾಕಿದ್ದಾರೆ.

ದಕ್ಷಿಣ ಆಫ್ರಿಕಾ ಟೆಸ್ಟ್ ತಂಡದ ಆಯ್ಕೆ ಸಭೆಗೆ ಒಂದೂವರೆ ಗಂಟೆ ಮುಂಚೆ ತಮಗೆ ಆಯ್ಕೆ ಸಮಿತಿ ಅಧ್ಯಕ್ಷ ಚೇತನ್ ಶರ್ಮ ಅವರು ಏಕದಿನ ಪಂದ್ಯದ ನಾಯಕತ್ವದಿಂದ ತೆಗೆದು ಹಾಕುವ ಬಗ್ಗೆ ತಿಳಿಸಿದ್ದರು ಎಂದು ಕೊಹ್ಲಿ ಹೇಳಿದ್ದಾರೆ.

ಟಿ20 ನಾಯಕತ್ವದಿಂದ ಕೆಳಗಿಳಿಯದಂತೆ ಕೊಹ್ಲಿಗೆ ಬಿಸಿಸಿಐ ಕೇಳಿತ್ತು ಎಂದು ಮಂಡಳಿಯ ಅಧ್ಯಕ್ಷ ಸೌರವ್ ಗಂಗೂಲಿ ಹೇಳಿದ್ದರು. ಬಿಸಿಸಿಐ ಹೇಳಿಕೆಯ ವಿರುದ್ಧ ನಾಯಕರೊಬ್ಬರು (3ನೇ ಪುಟಕ್ಕೆ)

## ಎಸ್ಸೆಸ್ಸೆಂ ಹೆಸರಲ್ಲಿ ನಕಲಿ ಫೇಸ್ ಬುಕ್ ಖಾತೆ




ದಾವಣಗೆರೆ, ಡಿ.15- ಕಾಂಗ್ರೆಸ್ ಮುಖಂಡ, ಮಾಜಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಹೆಸರಿನಲ್ಲಿ ಅಪರಿಚಿತರು ನಕಲಿ ಫೇಸ್‌ಬುಕ್ ಖಾತೆಯನ್ನು ಸೃಷ್ಟಿಸಿದ್ದಾರೆ. ಎಸ್‌ಎಸ್‌ಎಂ ದಾವಣಗೆರೆ ಎನ್ನುವ ಹೆಸರಲ್ಲಿ ಫೇಸ್‌ಬುಕ್ ಖಾತೆ ತೆರೆದಿದ್ದು, ಅದರಲ್ಲಿ ಹಾಯ್, ಗುಡ್‌ಮಾರ್ನಿಂಗ್, ಹೇಗಿದ್ದೀರಾ, ಎಲ್ಲಿದ್ದೀರಾ (3ನೇ ಪುಟಕ್ಕೆ)

## ತಾಲಿಬಾನಿಗಳು ಕಾಬುಲ್‌ಗೆ ಬರುವಂತೆ ಆಹ್ವಾನಿಸಿತ್ತು !

**ಮಾಜಿ ಅಧ್ಯಕ್ಷ ಕರ್ಜಾಯಿಯಿಂದ ವಿವರ ಬಹಿರಂಗ**

ಕಾಬುಲ್, ಡಿ. 15 - ತಾಲಿಬಾನಿಗಳು ಆಫ್ಘಾನಿಸ್ತಾನದ ರಾಜಧಾನಿಯನ್ನು ವಶಪಡಿಸಿಕೊಂಡಿರಲಿಲ್ಲ. ಅವರಿಗೆ ನಗರವನ್ನು ತೆಕ್ಕೆಗೆ ತೆಗೆದುಕೊಳ್ಳಲು ಆಹ್ವಾನ ನೀಡಲಾಗಿತ್ತು ಎಂದು ಆಫ್ಘಾನ್ ಮಾಜಿ ಅಧ್ಯಕ್ಷ ಹಮೀದ್ ಕರ್ಜಾಯಿ ತಿಳಿಸಿದ್ದಾರೆ.

ಅಸೋಸಿಯೇಟೆಡ್ ಪ್ರೆಸ್‌ಗೆ ಸಂದರ್ಶನ ನೀಡಿದ್ದ ಕರ್ಜಾಯಿ ಈ ವಿವರ ಬಹಿರಂಗ ಪಡಿಸಿದ್ದಾರೆ. ಇದು ಆಫ್ಘಾನ್ ಅಧ್ಯಕ್ಷರಾಗಿದ್ದ ಅಶ್ರಫ್ ಘನಿ ಅವರು ಹಠಾತ್ತನೆ ದೇಶ ಬಿಟ್ಟು ಹೋಗಿದ್ದು ಹೇಗೆ ಎಂಬುದರ ಬಗ್ಗೆ ಬೆಳಕು ಚೆಲ್ಲುತ್ತಿದೆ.

ಕಾಬುಲ್ ಹಾಗೂ ದೇಶ ಅರಾಜಕತೆಗೆ (3ನೇ ಪುಟಕ್ಕೆ)

## ಹೆಂಡದಂಗಡಿಗೆ 8 ನಿಯಮ, ಶಿಕ್ಷಣ ಸಂಸ್ಥೆಗೆ 80 ನಿಯಮ

### ಹರಪನಹಳ್ಳಿ: ಖಾಸಗಿ ಶಿಕ್ಷಣ ಸಂಸ್ಥೆಗಳ ಮೇಲೆ ಅವೈಜ್ಞಾನಿಕ ನಿಯಮಗಳ ಹೇರಿಕೆ ವಿರೋಧಿಸಿ ಪ್ರತಿಭಟನೆ




ಹರಪನಹಳ್ಳಿ, ಡಿ.15- ಸರ್ಕಾರ ಖಾಸಗಿ ಅನುದಾನ ರಹಿತ ಶಿಕ್ಷಣ ಸಂಸ್ಥೆಗಳ ಮೇಲೆ ಅವೈಜ್ಞಾನಿಕ ನಿಯಮಗಳ ಹೇರಿಕೆಯನ್ನು ವಿರೋಧಿಸಿ ಮಠಾಧೀಶರು, ಖಾಸಗಿ ಶಾಲೆಯ ಶಿಕ್ಷಕರು, ಆಡಳಿತ ಮಂಡಳಿ ಸದಸ್ಯರು ಬೃಹತ್ ಪ್ರತಿಭಟನೆ ನಡೆಸಿ ತಹಶೀಲ್ದಾರ್ ಅವರಿಗೆ ಮನವಿ ಸಲ್ಲಿಸಿದರು.

ಪಟ್ಟಣದ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿ ಆವರಣದಲ್ಲಿ ಶಿಕ್ಷಕರು ಸಭೆ ಸೇರಿ, ನಂತರ ಹೊಸಪೇಟೆ ರಸ್ತೆ, ಐ.ಬಿ.ವೃತ್ತದ ಮೂಲಕ ತಾಲ್ಲೂಕು ಮಿನಿ ವಿಧಾನಸೌಧ ದವರೆಗೆ ಸರ್ಕಾರದ ವಿರುದ್ಧ ಘೋಷಣೆ ಕೂಗುತ್ತಾ, ಭಿತ್ತಿಪತ್ರ ಹಿಡಿದು ಮೆರವಣಿಗೆ ನಡೆಸಿದರು.

ಸರ್ಕಾರ ಖಾಸಗಿ ಶಿಕ್ಷಣ ಸಂಸ್ಥೆಗಳ ನವೀಕರಣಕ್ಕೆ, ಕಟ್ಟಡ ಸುರಕ್ಷತೆ ಮತ್ತು ಅಗ್ನಿ ಸುರಕ್ಷತೆಯ ಹೆಸರಿನಲ್ಲಿ ಅನೇಕ ದಾಖಲೆಗಳನ್ನು ಕಡ್ಡಾಯಗೊಳಿಸಿರುವುದರಿಂದ ಮಧ್ಯಮ ಹಾಗೂ ಗ್ರಾಮೀಣ ಭಾಗದ ಶಾಲೆಗಳು ಮುಚ್ಚುವ ಪರಿಸ್ಥಿತಿಗೆ ಬಂದಿವೆ.

ಖಾಸಗಿ ಶಾಲೆಗಳನ್ನು ಮುಚ್ಚಿದರೆ ಬಡ ಮಕ್ಕಳ ಶಿಕ್ಷಣವನ್ನು ಸರ್ಕಾರ ಕಸಿದುಕೊಂಡಂತಾಗುತ್ತದೆ. ಅಲ್ಲದೇ ಅನೇಕ ಶಿಕ್ಷಕರು, ಬೋಧಕೇತರ ಸಿಬ್ಬಂದಿಗಳ ಜೀವನ ಬೀದಿಗೆ ಬೀಳುವುದು. ಆದ್ದರಿಂದ ಶಾಲಾ ನಿಯಮಗಳನ್ನು ಸರಳೀಕರಣಗೊಳಿಸಬೇಕು. ಲಿಕ್ಕರ್ ಅಂಗಡಿ ಪರವಾನಿಗೆ 8 ನಿಯಮಗಳನ್ನು ಅಳವಡಿಸಿದ್ದಾರೆ. ಆದರೆ ಶಿಕ್ಷಣ ಸಂಸ್ಥೆಗಳನ್ನು ತೆರೆಯಲು 80 ನಿಯಮಗಳನ್ನು ಅಳವಡಿಸಿರುವುದು ಸರಿಯಲ್ಲ ಎಂದು ಪ್ರತಿಭಟನಾಕಾರರು ಒತ್ತಾಯಿಸಿದರು.

ಡಿ.23 ರೊಳಗೆ (3ನೇ ಪುಟಕ್ಕೆ)


## ಐದನೇ ವರ್ಷದ ಪುಣ್ಯಸ್ಮರಣೆ



**ದಿ|| ಶ್ರೀಮತಿ ನಾಗರತ್ನಮ್ಮ ಎಸ್.ಕೆ.**

ನೀವು ನಮ್ಮನ್ನಗಲಿ ಇಂದಿಗೆ ಐದು ವರ್ಷಗಳಾದವು
ಸದಾ ನಿಮ್ಮ ಸ್ಮರಣೆಯಲ್ಲಿರುವ ...

ಪತಿ : ಶ್ರೀ ಎಸ್.ಟಿ. ಕುಸುಮಶ್ರೇಷ್ಠಿ, ವರ್ತಕರು, ದಾವಣಗೆರೆ.
ಮಕ್ಕಳಾದ : ಡಾ|| ಎಸ್.ಕೆ. ವೆಂಕಟೇಶ್ ಗುಪ್ತ ಮತ್ತು ಶ್ರೀಮತಿ ಡಾ|| ಮಾದವಿ ಗುಪ್ತ
ಎಸ್.ಕೆ. ಪ್ರಶಾಂತ ಗುಪ್ತ ಮತ್ತು ಶ್ರೀಮತಿ ದೀಪಾ ಎಸ್.ಪಿ.
ಎಸ್.ಕೆ. ತಿಮ್ಮರಾಜ ಗುಪ್ತ ಮತ್ತು ಶ್ರೀಮತಿ ಶ್ರೀ ಗೌರಿ
ಎಸ್.ಪಿ. ಸಂದೀಪ್ ಮತ್ತು ಶ್ರೀಮತಿ ಪೂರ್ಣಿಮಾ ಹಾಗೂ ಬಂಧು-ಮಿತ್ರರು.

# ರೋಗ ಮುಕ್ತ ಸಮಾಜ ನಿರ್ಮಾಣಕ್ಕೆ ಆರೋಗ್ಯ ಶಿಬಿರಗಳು ಅವಶ್ಯಕ



**ಶ್ರೀ ವರಸದ್ಯೋಜಾತ ಶಿವಾಚಾರ್ಯ ಸ್ವಾಮೀಜಿ**

ಹರಪನಹಳ್ಳಿ, ಡಿ.15- ಶಿಕ್ಷಣ ದಾಸೋಹ, ಅನ್ನ ದಾಸೋಹದ ಜೊತೆಗೆ ಮಠದ ಆಶ್ರಯದಲ್ಲಿ ಆರೋಗ್ಯ ಶಿಬಿರಗಳನ್ನು ಪ್ರತಿವರ್ಷ ಏರ್ಪಾಡು ಮಾಡಲಾಗುತ್ತಿದೆ. ರೋಗಮುಕ್ತ ಸಮಾಜ ನಿರ್ಮಾಣ ಮಾಡಲು ಆರೋಗ್ಯ ಶಿಬಿರಗಳು ಅವಶ್ಯಕ ಎಂದು ಶ್ರೀ ವರಸದ್ಯೋಜಾತ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ಪಟ್ಟಣದ ತೆಗ್ಗಿನಮಠದ ಆವರಣದಲ್ಲಿ ಎಸ್.ಸಿ. ಎಸ್. ಔಷಧ ಮಹಾವಿದ್ಯಾಲಯ , ಹರಪನಹಳ್ಳಿ ಹಾಗೂ ಎಸ್.ಎಸ್.ಐ.ಎಂ.ಎಸ್- ಸ್ಪರ್ಶ್ ಮತ್ತು ನಾರಾಯಣ ಹೃದಯಾಲಯದ ಸಹಯೋಗದೊಂದಿಗೆ ಉಚಿತ ಕೀಲು, ಮೂಳೆ ತಪಾಸಣೆ ಮತ್ತು ಹೃದಯ ರೋಗ ತಪಾಸಣೆ ಶಿಬಿರದ ಉದ್ಘಾಟನಾ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಶ್ರೀಗಳು ಮಾತನಾಡಿದರು.

ಹಿಂದುಳಿದ ವರ್ಗದವರಿಗೆ ಉಪಯೋಗ ವಾಗಲಿ ಎಂದು ಇಂತಹ ಶಿಬಿರಗಳನ್ನು ನಡೆಸಲಾಗುತ್ತದೆ. ಶ್ರೀ ಮಠಗಳಲ್ಲಿ ನಡೆಯುವ ಕಾರ್ಯಕ್ರಮಗಳು ಇತರೆ ಮಠಗಳಿಗಿಂತ ಭಿನ್ನವಾಗಿರಬೇಕೆಂಬುದು ನಮ್ಮ ಬಯಕೆ ಯಾಗಿದೆ ಎಂದರು.

ತಾಲ್ಲೂಕು ಆರೋಗ್ಯಾಧಿಕಾರಿ ಹಾಲಸ್ವಾಮಿ ಮಾತನಾಡಿ, ಪ್ರಸ್ತುತ ದಿನಗಳಲ್ಲಿ ಆರೋಗ್ಯಕ್ಕೆ ಹೆಚ್ಚು ಮಹತ್ವ ನೀಡಬೇಕು.

ಪ್ರತಿಯೊಬ್ಬರೂ 2 ಡೋಸ್ ಕೋವಿಡ್ ಲಸಿಕೆ ಹಾಕಿಸಿಕೊಳ್ಳುವಂತೆ ಕರೆ ನೀಡಿದರು.

ತೆಗ್ಗಿನ ಮಠದ ಆಡಳಿತಾಧಿಕಾರಿ ಟಿ.ಎಂ. ಚಂದ್ರಶೇಖರಯ್ಯ ಮಾತನಾಡಿ, ಜನರು ಹಣ ಗಳಿಕೆಯ ಭರದಲ್ಲಿ ಆರೋಗ್ಯದ ಕಡೆಗೆ ಗಮನ ನೀಡದಿರುವ ಬಗ್ಗೆ ವ್ಯಾಕುಲತೆ ವ್ಯಕ್ತಪಡಿಸಿದರು.

ಸಿ.ಪಿ.ಐ. ನಾಗರಾಜ್ ಕಮ್ಮಾರ ಕಾರ್ಯಕ್ರಮವನ್ನು ಉದ್ಘಾಟಿಸಿದರು.

ಫಾರ್ಮಸಿ ಕಾಲೇಜು ಪ್ರಾಚಾರ್ಯ ನಾಗೇಂದ್ರರಾವ್, ಭಂಗಿ ಬಸಪ್ಪ ಪಿಯು ಕಾಲೇಜು ಪ್ರಾಚಾರ್ಯ ಅರುಣಕುಮಾರ್, ವೀರನಗೌಡ್ರು, ಉಪಪ್ರಾಚಾರ್ಯ ಇಟಿಗಿ ಷಣ್ಮುಖ, ಡಾ.ಪ್ರವೀಣ್ ಅಣ್ವೇಕರ್, ಡಾ.ರಾಜೇಶ್, ರವಿಶಂಕರ್ ಸೇರಿದಂತೆ ಇತರರಿದ್ದರು.

# ರಸ್ತೆಗಳ ದುರಸ್ತಿಗೆ ಸಂಘಟನೆಗಳ ಒತ್ತಾಯ



**ಹರಿಹರದಲ್ಲಿಆಟೋ ಚಾಲಕರ ಮತ್ತು ಮಾಲೀಕರ ಸಂಘ, ಜಯಕರ್ನಾಟಕ ಸಂಘಟನೆಗಳಿಂದ ಪ್ರತಿಭಟನೆ**

ಹರಿಹರ, ಡಿ. 15 - ನಗರದ ಸಿ.ಸಿ. ರಸ್ತೆಗಳು ಸಂಪೂರ್ಣ ಹಾಳಾಗಿರುವುದರಿಂದ ಸಂಚಾರಕ್ಕೆ ತೊಂದ ರೆಯಾಗುತ್ತಿರುವುದನ್ನು ಸರಿಪಡಿಸುವಂತೆ ಹಲವಾರು ಸಂಘಟನೆಗಳು ನಗರಸಭೆಯನ್ನು ಒತ್ತಾಯಿಸಿವೆ.

ಆಟೋ ಚಾಲಕರ ಮತ್ತು ಮಾಲೀಕರ ಸಂಘ, ಜಯಕರ್ನಾಟಕ ಸಂಘಟನೆ, ರಕ್ಷಣಾ ವೇದಿಕೆ ಪ್ರವೀಣ್ ಶೆಟ್ಟಿ ಬಣ ಹಾಗೂ ಹೆಚ್. ಶಿವರಾಮೇಗೌಡ ಬಣದ ಜೊತೆಗೆ ವಿವಿಧ ಕನ್ನಡಪರ ಸಂಘಟನೆಗಳು, ಆದಷ್ಟು ಬೇಗನೆ ರಸ್ತೆಗಳನ್ನು ಸರಿಪಡಿಸುವಂತೆ ನಗರಸಭೆ ಪೌರಾಯುಕ್ತರಾದ ಶ್ರೀಮತಿ ಎಸ್. ಲಕ್ಷ್ಮಿ ಅವರಿಗೆ ಮನವಿ ಸಲ್ಲಿಸಿದ್ದಾರೆ.

ಈ ವೇಳೆ ಮಾತನಾಡಿದ ಮುಖಂಡರು, ಹರಿಹರ ನಗರ ವ್ಯಾಪ್ತಿಗೆ ಒಳಪಟ್ಟ ಎಲ್ಲಾ ವಾರ್ಡ್‌ಗಳಲ್ಲಿ ಯು.ಜಿ.ಡಿ. ಕಾಮಗಾರಿಯಿಂದಾಗಿ ಸಿ.ಸಿ ರಸ್ತೆಗಳು ಸಂಪೂರ್ಣ ಹಾಳಾಗಿವೆ. ಆಟೋ ಚಾಲಕರಿಗೆ ಮತ್ತು ವಾಹನ ಚಾಲಕರಿಗೆ, ಸಾರ್ವಜನಿಕರಿಗೆ, ಶಾಲಾ-ಕಾಲೇಜು ವಿದ್ಯಾರ್ಥಿಗಳಿಗೆ, ವೃದ್ಧರಿಗೆ, ಗರ್ಭಿಣಿ ಸ್ತ್ರೀಯರಿಗೆ, ರೋಗಿಗಳಿಗೆ ಇನ್ನು ಮುಂತಾದವರಿಗೆ ಹಲವಾರು ತೊಂದರೆಗಳಾಗಿವೆ ಎಂದರು.

ಈ ಸಂದರ್ಭದಲ್ಲಿ ಆಟೋಚಾಲಕರ ಮತ್ತು ಮಾಲೀಕರ ಸಂಘದ ಗೌರವ ಅಧ್ಯಕ್ಷ ಸಿ.ಎಂ. ಸಿದ್ದಲಿಂಗಸ್ವಾಮಿ, ಅಧ್ಯಕ್ಷ ಬಿ.ಎಸ್. ಮೋಹನ್, ಉಪಾಧ್ಯಕ್ಷರು ಟಿ.ಹೆಚ್. ನಾಗರಾಜ್, ಪ್ರಧಾನ ಕಾರ್ಯದರ್ಶಿ ಎಸ್. ಕೇಶವ ಮತ್ತು ಆಟೋ ಹನುಮಂತಪ್ಪ, ತಿಪ್ಪೇಶ್, ರಾಜು, ಮುತ್ತು, ಜಯಕರ್ನಾಟಕ ಸಂಘಟನೆಯ ತಾಲ್ಲೂಕು ಅಧ್ಯಕ್ಷ ಎಸ್. ಗೋವಿಂದ, ಉಪಾಧ್ಯಕ್ಷ ಎಂ.ಆರ್. ಆನಂದ್, ಪ್ರವೀಣ್ ಶೆಟ್ಟಿ ಬಣದ ಅಧ್ಯಕ್ಷ ರಮೇಶ್ ಮಾನೆ, ಪ್ರಧಾನ ಕಾರ್ಯದರ್ಶಿ ಪ್ರೀತಮ್ ಬಾಬು ಮತ್ತು ಹೆಚ್. ಶಿವರಾಮೇಗೌಡರ ಬಣ ಅಧ್ಯಕ್ಷ ಎಂ ಇಲಿಯಾಜ್, ಸೈಫುಲ್ಲಾ, ಸೈಯದ್ ಶಫಿ, ಯೂನಸ್, ಮಂಜುನಾಥ್ ಮತ್ತಿತರರು ಉಪಸ್ಥಿತರಿದ್ದರು.

# ಕೊಮಾರನಹಳ್ಳಿ : ವಿದ್ಯಾರ್ಥಿಗಳಿಗೆ ಬ್ಯಾಗ್, ಮಾಸ್ಕ್ ವಿತರಣೆ



ಮಲೇಬೆನ್ನೂರು, ಡಿ. 15- ಕೊಮಾರನಹಳ್ಳಿ ಗ್ರಾಮದ ಹಳೇ ಊರು ಮತ್ತು ಹೊಸೂರು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳ ವಿದ್ಯಾರ್ಥಿಗಳಿಗೆ ಗ್ರಾ.ಪಂ ಸದಸ್ಯ ಮಡಿವಾಳರ ಬಸವರಾಜ್ ಅವರು ಸ್ಕೂಲ್ ಬ್ಯಾಗ್‌ಗಳನ್ನು ಹಾಗೂ ಗ್ರಾ.ಪಂ ಮಾಜಿ ಅಧ್ಯಕ್ಷ ದಾನಪ್ಪ ಹನುಮಂತಪ್ಪ ಅವರು ಎನ್-95 ಮಾಸ್ಕ್‌ಗಳನ್ನು ವಿತರಿಸಿದರು.

ಈ ಸಂದರ್ಭದಲ್ಲಿ ಆಶಾ ಕಾರ್ಯಕರ್ತೆ ರೇಖಾ, ಮಂಜುಳಮ್ಮ ಮತ್ತು ಅಂಗನವಾಡಿ ಕಾರ್ಯಕರ್ತೆ ಅನುಸೂಯಮ್ಮ, ಮಂಜುಳ, ಶೃತಿ ಅವರನ್ನು ಕೋವಿಡ್ ವೇಳೆ ಅತ್ಯುತ್ತಮವಾಗಿ ಕಾರ್ಯನಿರ್ವಹಿಸಿದ ಹಿನ್ನೆಲೆಯಲ್ಲಿ ಸನ್ಮಾನಿಸಿ ಗೌರವಿಸಲಾಯಿತು.

ಈ ನಿಮಿತ್ಯ ಹಮ್ಮಿಕೊಂಡಿದ್ದ ಸರಳ ಕಾರ್ಯಕ್ರಮದಲ್ಲಿ ಎಪಿಎಂಸಿ ಅಧ್ಯಕ್ಷ ಜಿ.ಮಂಜುನಾಥ್ ಪಟೇಲ್, ತಾ.ಪಂ.ಮಾಜಿ ಅಧ್ಯಕ್ಷ ಎಸ್.ಜಿ. ಪರಮೇಶ್ವರಪ್ಪ, ಗ್ರಾ.ಪಂ. ಮಾಜಿ ಅಧ್ಯಕ್ಷ ಎಸ್.ಎಂ. ಮಂಜುನಾಥ್, ಶಿಕ್ಷಕಿ ರೇಣುಕಮ್ಮ ಅವರುಗಳು ಮಾತನಾಡಿ, ಶಾಲೆ ಹಾಗೂ ವಿದ್ಯಾರ್ಥಿಗಳ ಬಗ್ಗೆ ಕಳಕಳಿ ಹೊಂದಿರುವ ದಾನಪ್ಪ, ಹನುಮಂತಪ್ಪ ಮಡಿವಾಳರ ಬಸವರಾಜ್ ಅವರ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

'ಜನತಾವಾಣಿ' ವರದಿಗಾರ ಜಿಗಳಿ ಪ್ರಕಾಶ್ ಮಾತನಾಡಿ, ಉತ್ತಮ ಪರಿಸರದಲ್ಲಿರುವ ಈ ಶಾಲೆ ತಾಲ್ಲೂಕಿಗೆ ಮಾದರಿ ಶಾಲೆಯಾಗಿ ಹೊರ ಹೊಮ್ಮುವಂತೆ ಗ್ರಾಮಸ್ಥರು, ಎಸ್‌ಡಿಎಂಸಿ ಸಮಿತಿ, ಶಿಕ್ಷಕರು ನೋಡಿ ಕೊಳ್ಳಬೇಕೆಂದು ಹೇಳಿದರು.

ಎಸ್‌ಡಿಎಂಸಿ ಅಧ್ಯಕ್ಷ ಸಂತೋಷಕುಮಾರ್ ಅಧ್ಯಕ್ಷತೆ ವಹಿಸಿದ್ದರು. ಗ್ರಾ.ಪಂ. ಸದಸ್ಯ ನೇತ್ರಾವತಿ ಹನುಮಂತಪ್ಪ, ಪರಮೇಶ್ವರನಾಯ್ಕ, ಎಸ್.ಡಿ. ರಂಗನಾಥ್, ದಾನಪ್ಪ ಅರುಣ್ ಕುಮಾರ್, ಅರ್ಚನಾ ಬಸವರಾಜ್, ಎಸ್.ಹೆಚ್. ಹಾಲೇಶ್, ಆಂಜನೇಯ, ನಾಗರಾಜ್‌ನಾಯ್ಕ್, ಶಾಲಾ ಮುಖ್ಯ ಶಿಕ್ಷಕರಾದ ಸುಲೋಚನಮ್ಮ, ಶಿಕ್ಷಕರಾದ ರಾಮಪ್ಪ ಗೋಣೇರ್, ಭೂಮೇಶ್, ಮಂಜಪ್ಪ, ನಜ್ಮಾ ಹಬೀಬ್ ಮತ್ತು ಕುಂಬಳೂರು ವಾಸು ಭಾಗವಹಿಸಿದ್ದರು.

# ವರಿಷ್ಠರ ಅಸಮಾಧಾನ

**(1ನೇ ಪುಟದಿಂದ)** ಮೂಲಗಳು ಹೇಳಿವೆ. ಕೇಂದ್ರದ ಮಾಹಿತಿ ಬರುತ್ತಿದ್ದಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನಿನ್ನೆ ರಾತ್ರಿ ಪಕ್ಷದ ಹಿರಿಯ ನಾಯಕ ಯಡಿಯೂರಪ್ಪ ಅವರನ್ನು ಭೇಟಿ ಮಾಡಿ, ಈ ಸಂಬಂಧ ಚರ್ಚಿಸಿದ್ದಲ್ಲದೆ, ಯಾವ ರೀತಿ ವರದಿ ನೀಡಬೇಕು ಎಂಬುದರ ಬಗ್ಗೆ ಸಲಹೆ ಪಡೆದುಕೊಂಡಿದ್ದಾರೆ.

25 ಸ್ಥಾನಗಳಲ್ಲಿ 20 ಕ್ಷೇತ್ರದಲ್ಲಿ ಸ್ಪರ್ಧಿಸಿ, 11 ಸ್ಥಾನಗಳನ್ನು ಬಿಜೆಪಿ ತನ್ನ ಬುಟ್ಟಿಗೆ ಹಾಕಿಕೊಂಡು ಕಾಂಗ್ರೆಸ್ ಜೊತೆ ಸಮಬಲ ಪ್ರದರ್ಶನ ಮಾಡಿದೆ.

ಕಳೆದ ಬಾರಿಗಿಂತ ಈ ಬಾರಿ ಪಕ್ಷ ಹೆಚ್ಚಿನ ಸ್ಥಾನ ಗಳಿಸಿದ್ದರೂ, ವರಿಷ್ಠರಿಗೆ ತೃಪ್ತಿ ಇಲ್ಲ. ದಕ್ಷಿಣ ಕನ್ನಡದ ಮೊದಲ ಹಾಗೂ ಬಳ್ಳಾರಿ ಕ್ಷೇತ್ರವನ್ನು ಹೊರತುಪಡಿಸಿದರೆ, ಉಳಿದ ಕ್ಷೇತ್ರಗಳಲ್ಲಿ ಅತೀ ಕಡಿಮೆ ಅಂತರ ಇಲ್ಲವೇ ಶ್ರಮಪಟ್ಟು ಗೆಲುವು ಸಾಧಿಸಿದೆ. ಇದರ ಬಗ್ಗೆ ತೀವ್ರ ಅತೃಪ್ತಿ ವ್ಯಕ್ತಪಡಿಸಿರುವ ವರಿಷ್ಠರು ಮುಂದೆ ವಿಧಾನಸಭಾ ಚುನಾವಣೆ ಎದುರಾಗುತ್ತದೆ. ಇಂತಹ ಸನ್ನಿವೇಶದಲ್ಲಿ ನಡೆದ ಗ್ರಾಮೀಣ ಚುನಾವಣೆಯಲ್ಲಿ ನಮಗೆ ಹಿನ್ನಡೆಯಾಗಿಲ್ಲವೇ? ಎಂದು ಕೇಳಿದ್ದಾರೆ.

ಸತತವಾಗಿ ನಮಗೆ ಬೆಂಬಲ ಸಿಗುತ್ತಿದ್ದ ಕ್ಷೇತ್ರಗಳಲ್ಲಿ ಹಿನ್ನಡೆಯಾಗಿದೆ. ದ್ವಿಸದಸ್ಯ ಕ್ಷೇತ್ರಗಳಲ್ಲಿ ದಕ್ಷಿಣ ಕನ್ನಡ ಹೊರತುಪಡಿಸಿದರೆ, ಉಳಿದಡೆ ನಮಗೆ ಒಂದು ರೀತಿ ಹಿನ್ನಡೆ.

ಬೆಳಗಾವಿ, ಮೈಸೂರಿನಲ್ಲಿ ಸೋಲು ಕಂಡಿದ್ದೀರಿ. ಇನ್ನು ಬಿಜಾಪುರ ಧಾರವಾಡದಲ್ಲಿ ಗೆಲುವಿಗೆ ಹರಸಹಾಸ ಮಾಡಿದ್ದೀರಿ ಎಂಬ ಎಲ್ಲ ಮಾಹಿತಿಯನ್ನು ನೀಡಿ, ಸಂಪೂರ್ಣ ವರದಿ ಸಲ್ಲಿಸು ವಂತೆ ವರಿಷ್ಠರು ರಾಜ್ಯ ಘಟಕಕ್ಕೆ ಸೂಚಿಸಿದ್ದಾರೆ ಎನ್ನಲಾಗುತ್ತಿದೆ.

# ಐಗೂರಿನ ದೇವಸ್ಥಾನದಲ್ಲಿ ಕಳುವು

ದಾವಣಗೆರೆ, ಡಿ.15-ಐಗೂರು ಗ್ರಾಮದ ಶ್ರೀ ಕರಿಯಮ್ಮ ದೇವಿ ದೇವಸ್ಥಾನದಲ್ಲಿನ ಹುಂಡಿಯಲ್ಲಿದ್ದ 30 ಸಾವಿರ ನಗದು ದೋಚಿರುವ ಘಟನೆ ಮೊನ್ನೆ ರಾತ್ರಿ ನಡೆದಿದೆ.

ದೇವಸ್ಥಾನದ ಮುಂದಿನ ಗೇಟಿಗೆ ಇಂಟರ್ ಲಾಕ್ ಮುರಿದು ಒಳಗೆ ಪ್ರವೇಶಿಸಿದ ಕಳ್ಳರು ಗರ್ಭಗುಡಿ ಮುಂದೆ ಇಟ್ಟಿದ್ದ ಕಬ್ಬಿಣದ ಲಾಕರ್ ಹುಂಡಿಯನ್ನು ಕಳವು ಮಾಡಿ, ಪಾದಗಟ್ಟೆ ಹಿಂದಿನ ಕಾಣಿಕೆ ಹುಂಡಿಯ ಬೀಗ ಮುರಿದು ಅದರಲ್ಲಿದ್ದ ಕಾಣಿಕೆಯ ಹಣವನ್ನು ದೋಚಿದ್ದಾರೆ ಎಂದು ದೇವಸ್ಥಾನದ ಅಧ್ಯಕ್ಷ ಹೆಚ್. ರಾಮಪ್ಪ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

# ರೇಣುಕಾ ಯಲ್ಲಮ್ಮ ದೇವಿ ಕಾರ್ತಿಕೋತ್ಸವ

ದಾವಣಗೆರೆ, ಡಿ.15- ವಿನೋಬನಗರ 4ನೇ ಮುಖ್ಯರಸ್ತೆ ಶಂಕರ್‌ನಾಗ್ ಸರ್ಕಲ್‌ನಲ್ಲಿ ನಾಡಿದ್ದು ದಿನಾಂಕ 17 ರ ಶುಕ್ರವಾರ ಸಂಜೆ 7ಕ್ಕೆ ಶ್ರೀ ರೇಣುಕಾ ಯಲ್ಲಮ್ಮದೇವಿ ಕಾರ್ತಿಕೋತ್ಸವ ನಡೆಯಲಿದೆ.

# ಅಧ್ಯಕ್ಷರಾಗಿ ಉಮಾಪತಿ ಪುನರಾಯ್ಕೆ



**(1ನೇ ಪುಟದಿಂದ)** ಕಾರ್ಯಾಧ್ಯಕ್ಷರಾಗಿ ಬಿ.ಲೋಕೇಶ್ (ದಾವಣಗೆರೆ), ಉಪಾಧ್ಯಕ್ಷರುಗಳಾಗಿ ಎಂ.ದೊಡ್ಡಪ್ಪ, ವಾಣಿ ಶಿವಣ್ಣ, ಅಂದನೂರು ಮುರುಗೇಶಪ್ಪ, ಆರ್.ಸಿ. ಪಾಟೀಲ್ (ಹರಿಹರ), ಕೆ.ಎಂ.ಪಂಚಾಕ್ಷರಪ್ಪ (ಚನ್ನಗಿರಿ), ಪ್ರಭಾ ಮುಚ್ಚಿನ್ (ನ್ಯಾಮತಿ) ಪ್ರಧಾನ ಕಾರ್ಯ ದರ್ಶಿಯಾಗಿ ಎಸ್.ಸಿ.ಕಾಶೀನಾಥ್, ಸಹ ಕಾರ್ಯದರ್ಶಿ ಯಾಗಿ ಮಮತ (ಚನ್ನಗಿರಿ) ಆಯ್ಕೆಯಾಗಿದ್ದಾರೆ.

ಜಿಲ್ಲಾ ಸಂಘಟನಾ ಕಾರ್ಯದರ್ಶಿಗಳಾಗಿ ಕಾಯಿ ಬಸವರಾಜ್ (ಹೊನ್ನಾಳಿ), ಎಸ್. ಜಗದೀಶ್ (ಚನ್ನಗಿರಿ), ಸದಸ್ಯರಾಗಿ ಎನ್.ಜಿ. ಬಸವನಗೌಡ್ರು (ಹರಿಹರ) ಗೌರಮ್ಮ(ಹರಿಹರ), ಭಾರತಿ (ಹೊನ್ನಾಳಿ), ವಾಗೀಶ್ ನುಚ್ಚಿನ್ (ನ್ಯಾಮತಿ) ಆಯ್ಕೆಯಾಗಿದ್ದಾರೆ.

ಇದೇ ಸಂದರ್ಭದಲ್ಲಿ ದಾವಣಗೆರೆ ಜಿಲ್ಲಾ ಪಂಚಮಸಾಲಿ ಸಮಾಜದ ಸಮಿತಿಯಿಂದ ಸಮಾಜದ ರಾಜ್ಯ ಸಂಘದ ಸದಸ್ಯರಾಗಿ ಮಹಾನಗರ ಪಾಲಿಕೆ ಮಾಜಿ ಉಪ ಮೇಯರ್ ಬಿ. ಲೋಕೇಶ್ (ದಾವಣಗೆರೆ), ಪರಮೇಶ್ವರಪ್ಪ ಪಟ್ಟಣಶೆಟ್ಟಿ (ಹೊನ್ನಾಳಿ - ನ್ಯಾಮತಿ), ಶ್ರೀಮತಿ ರಶ್ಮಿ ನಾಗರಾಜ್ ಕುಂಕೊದ್, ಆಯ್ಕೆಯಾಗಿದ್ದಾರೆ.

ಈ ಆಯ್ಕೆ ಪ್ರಕ್ರಿಯೆಯನ್ನು ನ್ಯಾಯವಾದಿಯೂ ಆಗಿರುವ ಜಿಲ್ಲಾ ಚುನಾವಣಾಧಿಕಾರಿ ಬಿ. ಬಸವರಾಜ್ ಉಚ್ಚಂಗಿದುರ್ಗ, ಹರಿಹರ ತಾಲ್ಲೂಕು ಚುನಾವಣಾಧಿ ಕಾರಿ ಮಲ್ಲಿಕಾರ್ಜುನ ಅಂಗಡಿ, ನ್ಯಾಮತಿ ತಾಲ್ಲೂಕು ಚುನಾವಣಾಧಿಕಾರಿ ವೀರೇಶ್ ಅವರುಗಳು ನಡೆಸಿಕೊಟ್ಟಿದ್ದಾರೆ.

# ಅಪಘಾತದಲ್ಲಿ ಕೃಷಿಕ ಸಾವು

ದಾವಣಗೆರೆ, ಡಿ.15- ಭತ್ತ ಮಾರಾಟ ಮಾಡಿದ್ದ ಪಟ್ಟಿ ಬರೆಸಿಕೊಂಡು ವಾಪಸ್ ತನ್ನೂರಿಗೆ ಬೈಕ್ ನಲ್ಲಿ ತೆರಳುತ್ತಿದ್ದಾಗ ಅಪರಿಚಿತ ವಾಹನ ಡಿಕ್ಕಿಪಡಿಸಿದ ಪರಿಣಾಮ ಯುವ ಕೃಷಿಕನೋರ್ವ ಮೃತಪಟ್ಟಿರುವ ಘಟನೆ ಬೀರೂರು-ಸಮ್ಮಸಗಿ ರಸ್ತೆಯಲ್ಲಿನ ಕುರ್ಕಿ ಗ್ರಾಮದ ಚಾನೆಲ್ ಹತ್ತಿರ ನಿನ್ನೆ ನಡೆದಿದೆ. ಚನ್ನಗಿರಿ ತಾಲ್ಲೂಕು ಉಪ್ಪನಾಯಕನಹಳ್ಳಿ ಗ್ರಾಮದ ರಂಗಸ್ವಾಮಿ (25) ಮೃತ ಕೃಷಿಕ.

**ಮಹಿಳಾ ಪಿ.ಜಿ.**
ಊಟ ಮತ್ತು ವಸತಿ ವ್ಯವಸ್ಥೆ ಇರುವ ಮಹಿಳಾ ಪಿ.ಜಿ. ಸೌಲಭ್ಯವಿದೆ. ಸಂಪರ್ಕಿಸಿ: "ಮೀನಾಕ್ಷಿ ಭವನ" ಆಂಜನೇಯ ಬಡಾವಣೆ, ಆಂಜನೇಯ ದೇವಸ್ಥಾನ ಹತ್ತಿರ ದಾವಣಗೆರೆ.
90601 72745

**ಶ್ರೀ ದುರ್ಗಾಂಬಿಕ ಹೋಂ ಕೇರ್ ಸರ್ವೀಸ್**
ನಮ್ಮಲ್ಲಿ ವಯೋವೃದ್ದರನ್ನು ನೋಡಿಕೊಳ್ಳಲು ಆಯಾಗಳನ್ನು ಕಳುಹಿಸುತ್ತೇವೆ. ವಯೋವೃದ್ದರನ್ನು ನೋಡಿಕೊಳ್ಳಲು ಯುವಕ, ಯುವತಿಯರು ಬೇಕಾಗಿದ್ದಾರೆ. (ಊಟ, ವಸತಿ ವ್ಯವಸ್ಥೆ ಇರುತ್ತದೆ.)
ಫೋ. : 96062 82814

**ಸಂಘ-ಸಂಸ್ಥೆಗಳ, ಟ್ರಸ್ಟ್‌ಗಳ GST & INCOME TAX ನೋಂದಣಿ, ನವೀಕರಣ, ಆಡಿಟ್ ಮಾಡಿಕೊಡುತ್ತೇವೆ.**
94838 62779

**ಬೇಕಾಗಿದ್ದಾರೆ**
ದಾವಣಗೆರೆ ನಗರದ ಸುತ್ತಮುತ್ತ ಇರುವ ಅಂದರೆ ಸೆಕ್ಯೂರಿಟೀಸ್ ಮತ್ತು ರಿಸಪ್ಷನ್, ರೂಮ್ ಬಾಯ್ಸ್ ಮತ್ತು ರಾಣೇಬೆನ್ನೂರು ತಾ।। ಹೀಲದಹಳ್ಳಿ ಸೆಕ್ಯೂರಿಟೀಸ್ ಬೇಕಾಗಿದ್ದಾರೆ. ಕೆಲವೆಡೆ ಊಟದ ವ್ಯವಸ್ಥೆ ಇರುತ್ತದೆ ಮತ್ತು ಲಾಡ್ಜ್‌ಗೆ ರಿಸೆಪ್ಷನ್ ಮತ್ತು ಬೆಂಗಳೂರಿನಲ್ಲಿ ಫ್ಯಾಮಿಲಿ ಬೇಕಾಗಿದ್ದಾರೆ. ಆಕರ್ಷಕ ಸಂಬಳ ಇರುತ್ತದೆ ಕೂಡಲೇ ಸಂಪರ್ಕಿಸಿ ಮತ್ತು ಆವರಗೆರೆಯಲ್ಲಿ ಬೇಕಾಗಿದ್ದಾರೆ.
74113 07071, 98806 48207

**ಕೆಲಸಕ್ಕೆ ಬೇಕಾಗಿದ್ದಾರೆ**
CSCಯಲ್ಲಿ ಅನುಭವ ಇರುವಂತಹ ಹುಡುಗ/ ಹುಡುಗಿಯರು ಬೇಕಾಗಿದ್ದಾರೆ.
ಶ್ರೀ ಸಾಯಿ ಸೇವಾ ಸಿಂಧೂ
ಭಾರತ್ ಕಾಲೋನಿ, ಎ. ಪಿ. ಎಮ್. ಸಿ ಮಾರ್ಕೆಟ್ ಹತ್ತಿರ, ದಾವಣಗೆರೆ
98448 50499, 97400 02949

**ಟಿರು ಫಿಲ್ಮ್ ಅಕಾಡೆಮಿ ದಾವಣಗೆರೆ**
ಆನಂತರ ಕಿಸಾನ್ ಟಿವಿ ಎಂಬ ಕನ್ನಡ ಕಾಮಿಡಿ ಸಿನಿಮಾ ನಿರ್ಮಿಸಲು ಸಹ ನಿರ್ಮಾಪಕರು, ಹೂಡಿಕೆದಾರರು ಬೇಕಾಗಿದ್ದಾರೆ. ಸಂಪರ್ಕಿಸಿ
86609 55913, 91104 16055

**ಬೇಕಾಗಿದ್ದಾರೆ**
ನಮಗೆ ಅಕೌಂಟ್ಸ್ ಬರೆಯಲು Tally ಕಲಿತ ಅನುಭವವಿರುವ ಮಹಿಳಾ ಅಭ್ಯರ್ಥಿ ಬೇಕಾಗಿದ್ದಾರೆ. ಸಂಪರ್ಕಿಸಿ:
ಆನಂದ ಹಾರ್ಡ್‌ವೇರ್ಸ್ ಅಂಡ್ ಪೇಂಟ್ಸ್, ಮಂಡಿಪೇಟೆ, ದಾವಣಗೆರೆ.

**ಬೇಕಾಗಿದ್ದಾರೆ**
ಶ್ರೀ ವೀರಭದ್ರೇಶ್ವರ ಬೇಕರಿ (ಬೇಕರ್ ಪ್ಯಾಲೇಸ್) ಇಲ್ಲಿ ಬೇಕರಿ ತಿನಿಸುಗಳನ್ನು ತಯಾರಿಸಲು ಅನುಭವವುಳ್ಳ ತಯಾರಕರು (Bakery Item Makers) ಬೇಕಾಗಿರುತ್ತಾರೆ.
7676688599
9964177873

**ಬೇಕಾಗಿದ್ದಾರೆ**
ದಾವಣಗೆರೆ ಸಮೀಪ ಹೊಲ ಮತ್ತು ಆಕಳು ನೋಡಿಕೊಳ್ಳಲು ಬೇಕಾಗಿದ್ದಾರೆ. ಸಂಪರ್ಕಿಸಿ:
70185 88900
95388 70257

**ಬೇಕಾಗಿದ್ದಾರೆ**
ಕಂಪ್ಯೂಟರ್ ಬಿಲ್ಲಿಂಗ್ ಮಾಡಲು ಯಾವುದೇ ಡಿಗ್ರಿ ಆಗಿರುವ ಮತ್ತು Tally ಆಗಿರುವವರು ಬೇಕಾಗಿದ್ದಾರೆ. ಸಂಪರ್ಕಿಸಿ :
99002 65620

**ಅಡಿಕೆ ಸಸಿ ಮಾರಾಟಕ್ಕೆ**
ಉತ್ತಮ ತಳಿಯ ಅಡಿಕೆ ಸಸಿ ಮಾರಾಟಕ್ಕೆ ಲಭ್ಯವಿವೆ. ದಾವಣಗೆರೆಯಲ್ಲಿ (ದೊಡ್ಡ ಬಾತಿ) ಸಂಪರ್ಕಿಸಿ
88920 08800

**2 BHK ಮನೆ ಬಾಡಿಗೆಗಿದೆ**
2ನೇ ಮಹಡಿ, ನಂ. 1355, 1200 sft, 16ನೇ ಕ್ರಾಸ್, ತರಳಬಾಳು ಬಡಾವಣೆ, ಸೋಲಾರ್ ವ್ಯವಸ್ಥೆ ಇರುವ ನೂತನ ಬಿಲ್ಡಿಂಗ್.
88614 62603

**ಅಕೌಂಟೆಂಟ್ ಬೇಕಾಗಿದ್ದಾರೆ**
ಅಕೌಂಟೆಂಟ್ ಹುದ್ದೆಗೆ ಮಹಿಳೆಯರಾಗಲೀ, ಪುರುಷರಾಗಲೀ ಅಥವಾ ಡಿಗ್ರಿಯಾದವರು ಬೇಕಾಗಿದ್ದಾರೆ. ಸಂಪರ್ಕಿಸಿ :
ಶ್ರೀ ವೆಂಕಟೇಶ್ವರ ಜನರಲ್ ಮರ್ಚೆಂಟ್ಸ್
ಹಳೇ ಆಸ್ಪತ್ರೆ ಎದುರು, ದಾವಣಗೆರೆ.
98451-51179

**WALK IN INTERVIEW FOR LECTURER POST**
1) M.Tech & B.E. In Mechanicle, Civil, Computer Science & E&E
2) M.SC In Biology, Mathematics
SAMRUDDHI ACADEMY
63646 40296

**ಬೇಕಾಗಿದ್ದಾರೆ**
ಟೆಲಿಕಾಲರ್ಸ್, ಟೈಲರಿಂಗ್, ಹೆಲ್ಪರ್ಸ್, ಪುರುಷ ಹಾಗೂ ಮಹಿಳೆಯರು. ಸಂಪರ್ಕಿಸಿ :
78923 28599

**ಬೇಕಾಗಿದ್ದಾರೆ**
ಹಾಸ್ಟೆಲ್‌ನಲ್ಲಿ ಕಾರ್ಯನಿರ್ವಹಿಸಲು PUC, BA/BSc B.Ed. ಆಗಿರುವ ಮೂವರು ಮಹಿಳಾ ವಾರ್ಡನ್‌ಗಳು ಹಾಗೂ BSc B.Ed. (PM) ಆದ ಶಿಕ್ಷಕ/ಶಿಕ್ಷಕಿಯರು ಬೇಕಾಗಿದ್ದಾರೆ. ಸಂಪರ್ಕಿಸಿ
91106 79096

**WANTED ACCOUNTENT**
Tally Entry & Data Entry Employee with Minium 3 years of Experience. Time 10 Am-7PM M/S Noble Tarpaulin Compny Near Gandhi Circle, opp. R.H Building. P.B. Road, Davanagere.
90600 00643, 98442 07697

**ಬೇಕಾಗಿದ್ದಾರೆ**
1) ಲ್ಯಾಬ್ ಟೆಕ್ನೀಷಿಯನ್
2) ಆಯಾಗಳು
3) ವಾಚ್‌ಮನ್‌ಗಳು
ಸಂಪರ್ಕಿಸಿ:
98808 53626

**ದಾನಿಶ್ ಅಕ್ವೇರಿಯಮ್**
ದಾನಿಶ್ ಅಕ್ವೇರಿಯಮ್ ಎಂಬ ಮೂರು ಶಾಖೆಗಳಾದ KTG ನಗರ, ಸರಸ್ವತಿ ಬಡಾವಣೆ, ಜಯನಗರ ದಾವಣಗೆರೆಯಲ್ಲಿ ಕೆಲಸ ಮಾಡಲು ಯುವತಿಯರು ಬೇಕಾಗಿದ್ದಾರೆ. ವಸತಿ ಸೌಲಭ್ಯವಿರುತ್ತದೆ.
98453 70694, 97318 47601

**PHOTOSHOP & CORELDRAW CLASSES**
IN ALLPHABIT TECHNOLOGIES
CLASSES ALSO FOR
* C,C++ JAVA.
* CIVIL, MECHANICAL CADD
* CYBER SECURITY & ETHICAL HACKING.
* PYTHON MACHINE LEARNING.
8217624367, 8971279127

**ಹನ್ನೆರಡನೇ ವರ್ಷದ ಪುಣ್ಯಸ್ಮರಣೆ**

ದಿ।। ಶ್ರೀಮತಿ ಪಿ. ಶಶಿಕಲಾ
ಜನನ : 10.9.1957, ಮರಣ : 16.12.2009
ನೀವು ನಮ್ಮನ್ನಗಲಿ ಇಂದಿಗೆ ಹನ್ನೆರಡು ವರ್ಷಗಳಾದರೂ ಸಹ ನಿಮ್ಮ ನೆನಪು ನಮ್ಮಲ್ಲಿ ಸದಾ ಅಚ್ಚ ಹಸಿರಾಗಿದೆ. ನೀವು ಹೇಳಿ ಕೊಟ್ಟ ಆದರ್ಶಗಳು, ನಡೆ-ನುಡಿಗಳು, ನಯ-ವಿನಯಗಳೇ ನಮ್ಮ ಜೀವನದ ದಾರಿ ದೀಪವಾಗಿವೆ. ನಿಮ್ಮ ಆತ್ಮಕ್ಕೆ ಭಗವಂತನು ಚಿರಶಾಂತಿ ದಯಪಾಲಿಸಲೆಂದು ಸದಾ ಸ್ಮರಿಸುವ.
ಪತಿ : ಪಿ. ಪ್ರಕಾಶ್, ಮಕ್ಕಳಾದ : ರವಿರಾಜ್, ಶೃತಿ ಮತ್ತು ರಾಕೇಶ್
ಸೊಸೆಯಂದಿರು : ಕಾವ್ಯಶ್ರೀ, ವಿಜಯಲಕ್ಷ್ಮಿ ಮೊಮ್ಮಗಳು : ಖುಷಿ, ಆರ್ವಿ, ಬಂಧು-ಮಿತ್ರರು.

**ಭೂಮಿಕಾ ಮ್ಯಾಟ್ರಿಮೊನಿ**
ಲಿಂಗಾಯಿತ ವಧು-ವರರ ಕೇಂದ್ರ
H.O : Near Coffee day, Nutana College Road, Vidyanagara, 2nd Main, Davangere
77603 16576
90080 55813

**ಬೇಕಾಗಿದ್ದಾರೆ**
20-25 ವಯೋಮಾದ SSLC Pass/ Fail ಆದ ಯುವಕ/ಯುವತಿಯರು ನ್ಯುರೋಥೆರಪಿ ಕ್ಲಿನಿಕ್‌ನಲ್ಲಿ ಸಹಾಯಕ ಥೆರಪಿಸ್ಟ್ ಆಗಿ ಕೆಲಸ ಮಾಡಲು ಬೇಕಾಗಿದ್ದಾರೆ. ತಕ್ಷಣ ಸಂಪರ್ಕಿಸಿ :
99726 00713

**ಬೇಕಾಗಿದ್ದಾರೆ**
ಮನೆ ಕೆಲಸಕ್ಕೆ ಲಿಂಗಾಯತ ಮಹಿಳೆ ಬೇಕಾಗಿದ್ದಾರೆ. ಸಂಪರ್ಕಿಸಿ
ಮೊ. 91108 98377

**ನೀರಿನ ಲೀಕೇಜ್ (ವಾಟರ್ ಪ್ರೂಫಿಂಗ್)**
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
ಮೊ. 9538777582
ಕೆಲಸ 100% ಗ್ಯಾರಂಟಿ.

**ಅಣಬೆ ಸ್ವಯಂ ಕೃಷಿ**
ಯಾವುದೇ ಬೇಸಾಯವಿಲ್ಲದೇ ಮನೆಯಲ್ಲಿ ಅಣಬೆಯನ್ನು ಬೆಳೆದು ತಿನ್ನಲು ಬಳಸಬಹುದು. ಮತ್ತು ವ್ಯವಹಾರಿಕವಾಗಿ ಸ್ವಯಂ ಉದ್ಯೋಗದಿಂದ ಗಳಿಸಬಹುದು. ರೆಡಿಬ್ಯಾಗ್‌ನಲ್ಲಿ ಲಭ್ಯ. ಡೋರ್ ಡೆಲಿವರಿ ಇರುತ್ತದೆ. ಮಾಹಿತಿಗಾಗಿ ಸಂಪರ್ಕಿಸಿ.
ತನ್ವಿ ಬಯೋಟೆಕ್, ಎಪಿಎಂಸಿ, ದಾವಣಗೆರೆ.
7892874849, 8747919853, 9113072013

**ವಾಣಿಜ್ಯ ಮಳಿಗೆಗಳು ಬಾಡಿಗೆ ಇವೆ**
ಸ್ಟೇಡಿಯಂ ಕಾಂಪ್ಲೆಕ್ಸ್ ಎದುರುಗಡೆ ಬಾಲಾಜಿ ಪ್ಲಾಜಾ ಬಿಲ್ಡಿಂಗ್‌ನಲ್ಲಿ ಗ್ರೌಂಡ್ ಫ್ಲೋರ್ ಮತ್ತು ಬೇಸ್ಮೆಂಟ್ ಫ್ಲೋರ್ ಬಾಡಿಗೆ ಇದೆ. ಮೂಲಭೂತ ಎಲ್ಲಾ ಸೌಕರ್ಯಗಳ ವ್ಯವಸ್ಥೆ ಇದೆ.
ಗ್ರೌಂಡ್ ಫ್ಲೋರ್ - 600 Sq
ಬೇಸ್ಮೆಂಟ್ ಫ್ಲೋರ್ - 800 Sq
ಸ್ಥಳ : ಬಾಲಾಜಿ ಪ್ಲಾಜಾ, #1343/9B, ಸ್ಟೇಡಿಯಂ ಕಾಂಪ್ಲೆಕ್ಸ್ ಎದುರುಗಡೆ, ವಿನಾಯಕ ಮೆಡಿಕಲ್ ಹತ್ತಿರ, ಪೆವಿಲಿಯನ್ ರೋಡ್ ( AVK ಕಾಲೇಜ್ ರೋಡ್ ) P.J extension ದಾವಣಗೆರೆ.
PH: 98809 78152

**ಭಕ್ತಿಪೂರ್ವಕ ಶ್ರದ್ಧಾಂಜಲಿ**
ದಿನಾಂಕ 15.12.2021ರಂದು ಅಸೌಖ್ಯದಿಂದ ವಿಶ್ವಕರ್ಮ ಸಾಯುಜ್ಯ ಹೊಂದಿದ
ವೇದ ವೇದಾಂತಾಚಾರ್ಯ ರಾಷ್ಟ್ರಸಂತರಾದ
ವಿಶ್ವಕರ್ಮ ಸಮಾಜದ ಮೇರು ರತ್ನ
ಚಿಕ್ಕಬಳ್ಳಾಪುರ ಜಿಲ್ಲೆ, ನಂದಿ ಗ್ರಾಮದ ಶ್ರೀ ಜ್ಞಾನಾನಂದ ಆಶ್ರಮದ
**ಶ್ರೀ ಸ್ವಾಮಿ ಶಿವಾತ್ಮಾನಂದ ಸರಸ್ವತಿ ಸ್ವಾಮೀಜಿಯವರಿಗೆ**
ನಮ್ಮ ಭಕ್ತಿ ಪೂರ್ವಕ ಶ್ರದ್ಧಾಂಜಲಿ.
ಗುರುಗಳ ಅಗಲಿಕೆಯ ಶಕ್ತಿಯನ್ನು ಸಮಾಜದ ಗುರುಗಳ ಭಕ್ತವೃಂದಕ್ಕೆ ಭರಿಸಲೆಂದು ಶ್ರೀ ವಿಶ್ವಕರ್ಮರಲ್ಲಿ ಪ್ರಾರ್ಥಿಸುತ್ತೇವೆ.

ಅಧ್ಯಕ್ಷರು ಮತ್ತು ಪದಾಧಿಕಾರಿಗಳು
**ದಾವಣಗೆರೆ ಜಿಲ್ಲಾ ವಿಶ್ವಕರ್ಮ ಸಮಾಜ (ರಿ),** ದಾವಣಗೆರೆ
ಮತ್ತು ಸಮಸ್ತ ವಿಶ್ವಕರ್ಮ ಸಮಾಜ ಬಾಂಧವರು ಹಾಗೂ ಭಕ್ತ ವೃಂದದವರು.

**ಹಳೇಬಾತಿ ಕೆಂಗೋಳ್ ಶಿವಮ್ಮ ನಿಧನ**

ದಾವಣಗೆರೆ ತಾಲ್ಲೂಕು ಹಳೇಬಾತಿ ಗ್ರಾಮದ ವಾಸಿ ಕೆಂಗೋಳ್ ಗಿರಿಯಪ್ಪನವರ ಧರ್ಮಪತ್ನಿ ಕೆಂಗೋಳ್ ಶಿವಮ್ಮ (55) ಇವರು ದಿನಾಂಕ 15.12.2021ರ ಬುಧವಾರ ಸಂಜೆ 6 ಗಂಟೆಗೆ ನಿಧನರಾದರು. ಓರ್ವ ಪುತ್ರ, ಇಬ್ಬರು ಪುತ್ರಿಯರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 16.12.2021ರ ಗುರುವಾರ ಮಧ್ಯಾಹ್ನ 1 ಗಂಟೆಗೆ ಸ್ವಗ್ರಾಮ ಹಳೇಬಾತಿಯಲ್ಲಿ ನೆರವೇರಲಿದೆ.

**ತಕ್ಷಣ ಬೇಕಾಗಿದ್ದಾರೆ**
ಕೋರಿಯರ್ ಆಫೀಸ್‌ನಲ್ಲಿ ಕೋರಿಯರ್ ಡೆಲಿವರಿ (Delivary) ಮಾಡಲು ಹುಡುಗರು ಬೇಕಾಗಿದ್ದಾರೆ. Two wheeler Bike ಇರಬೇಕು. Petrol ಭತ್ಯೆ ಕೊಡಲಾಗುವುದು. ಮೂಲ ದಾಖಲಾತಿಗಳೊಂದಿಗೆ ಸಂಪರ್ಕಿಸಿ.
94807 95548, 98800 42597
(whatsapp no) 70199 83025

**WANTED**
Sales Executives for Field work of our products UPVC windows & SS Hond Railing. Contact : K. Sohanraj's winrail Opp.Stadium Complex Road, Davangere. whatsapp your Resume
94491 45676

**ಓಂ ಶ್ರೀ ದತ್ತಾತ್ರೇಯ ಜೋತಿಷ್ಯಾಲಯ**
ಪ।। ಶ್ರೀ ರಾಮ್ ಭಟ್,
ಮೊ. 98862 30791
ಅರಿತು ಅರಿಯದೆ, ತಿಳಿದು ತಿಳಿಯದೆ ಮಾಡಿದ ಪಾಪ ದೋಷಗಳಿಗೆ 3 ದಿನಗಳ ಪರಿಹಾರ. ನಿಮ್ಮ ಎಲ್ಲಾ ಸಮಸ್ಯೆಗಳನ್ನು ಗುಪ್ತವಾಗಿ ಇಡಲಾಗುವುದು. ದೂರವಾಣಿ ಮೂಲಕ ಇಂದೇ ಕರೆ ಮಾಡಿ

**ಹೆಸರು ಬದಲಾವಣೆ**
ಜಯರಾಜ್ ತಂದೆ ಭೂತಪ್ಪ ಆದ ನಾನು ನನ್ನ ಆಧಾರ್ ಕಾರ್ಡ್‌ನಲ್ಲಿ ಹಾಗೂ ಶಾಲಾ ದಾಖಲಾತಿಯಲ್ಲಿ ತಿರಮಲೇಶ್ ಎಂದು ಇರುತ್ತದೆ. ನಾನು ಇನ್ನಿತರೆ ಉದ್ದೇಶಕ್ಕಾಗಿ ನನ್ನ ಹೆಸರನ್ನು ಜಯರಾಜ್ ಎಂದು ದಿನಾಂಕ 15.12.2021 ರಂದು ನೋಟರಿಯವರ ಸಮ್ಮುಖದಲ್ಲಿ ತಿದ್ದುಪಡಿ ಮಾಡಿಸಿಕೊಳ್ಳುತ್ತಿದ್ದೇನೆ.

**ಹೆಸರು ಬದಲಾವಣೆ**
ಮನೋಹರ ತಂದೆ ಭೂತಪ್ಪ ಆದ ನಾನು ತಿಳಿಸುವುದೇನೆಂದರೆ ನನ್ನ ಆಧಾರ್ ಕಾರ್ಡ್‌ನಲ್ಲಿ ಹಾಗೂ ಶಾಲಾ ದಾಖಲಾತಿಯಲ್ಲಿ ಮಣಿಕಂಠ ಎಂದಿರುತ್ತದೆ. ನಾನು ಇನ್ನಿತರೆ ಉದ್ದೇಶಕ್ಕಾಗಿ ನನ್ನ ಹೆಸರನ್ನು ಮನೋಹರ ಎಂದು ದಿನಾಂಕ 15.12.2021 ರಂದು ನೋಟರಿಯವರ ಸಮ್ಮುಖದಲ್ಲಿ ತಿದ್ದುಪಡಿ ಮಾಡಿಸಿಕೊಂಡಿದ್ದೇನೆ.

**ನೇರ ಪರೀಕ್ಷೆಗಳು**
ಉನ್ನತ ಶಿಕ್ಷಣಕ್ಕೆ ಮತ್ತು ಸರ್ಕಾರಿ ಕೆಲಸಕ್ಕೆ ಉಪಯೋಗ SSLC, PUC Degree Courses, Pharmacy & BHMS (Goverment & Private College)
ಶ್ರೀ ಸಾಯಿ ಕರೆಸ್ಪಾಂಡೆನ್ಸ್ ಕಾಲೇಜ್
ಸೋಮ ಮೆಡಿಕಲ್ಸ್ ಮೇಲೆ ಗಣೇಶ ದೇವಸ್ಥಾನದ ಹಿಂಭಾಗ, ರಾಂ&ಕೋ ಸರ್ಕಲ್, ದಾವಣಗೆರೆ.
87490 24789, 94837 64859

**ನೇತ್ರ ದಾನ ಶ್ರೇಷ್ಠ ದಾನ**

**ಮೃಗಶಿರಾ ಹುಣ್ಣಿಮೆ ಔಷಧಿ ಪ್ರಾಶನ ಶಿಬಿರ**
ಕೆಮ್ಮು, ಶೀತ, ದಮ್ಮು, ಅಸ್ತಮಾ ಮುಂತಾದ ಶ್ವಾಸಕೋಶದ ವಿಶೇಷ ಚಿಕಿತ್ಸಾ ಶಿಬಿರ
ದಿನಾಂಕ ಮತ್ತು ಸಮಯ :
19.12.2021 ಬೆಳಿಗ್ಗೆ 4 ರಿಂದ ಬೆಳಿಗ್ಗೆ 5.30 ರವರೆಗೆ
ಅನ್ವಯ ಆಯುರ್ವೇದ ಆಸ್ಪತ್ರೆ
10ನೇ ಕ್ರಾಸ್, ಎಂ.ಸಿ.ಸಿ.'ಎ' ಬ್ಲಾಕ್, ಆಶ್ರಯ ಆಸ್ಪತ್ರೆ ಹಿಂಭಾಗ, ದಾವಣಗೆರೆ
ಫೋ: 252228 ಮೊ: 86186 42929

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ. ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, ಕೆ.ಎಸ್.ಆರ್.ಟಿ.ಸಿ. ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ. 4 ಮತ್ತು 18ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ।। ಎಸ್.ಎಂ. ಸೇಠಿ. ಫೋನ್ : 96322 95561
ಸಮಯ: ಬೆಳಿಗ್ಗೆ 10ರಿಂದ ಮಧ್ಯಾಹ್ನ 2 ರವರೆಗೆ.

**ಓಂ ಶ್ರೀ ಸರ್ವಶಕ್ತಿ ಹುಲಿಗೆಮ್ಮ ಜ್ಯೋತಿಷ್ಯಾಲಯ**
ಪಂಡಿತ್ ದುರ್ಗಾಪ್ರಸಾದ್ ಗುರೂಜಿ
ಫೋನಿನ ಮೂಲಕ ನಿಮ್ಮ ಸಮಸ್ಯೆಗಳಾದ ವಿದ್ಯೆ, ಉದ್ಯೋಗ, ಪ್ರೀತಿಯಲ್ಲಿ ಮೋಸ, ಮನೆಯಲ್ಲಿ ಅಶಾಂತಿ, ಸಾಲಬಾಧೆ, ಗಂಡ ಹೆಂಡತಿ ಕಿರಿಕಿರಿ ಇನ್ನಿತರೆ ಯಾವುದೇ ಸಮಸ್ಯೆಗಳಿಗೆ ಅತಿ ಶೀಘ್ರದಲ್ಲಿ ಪರಿಹಾರ.
ವಿಳಾಸ : ಹೈಸ್ಕೂಲ್ ಫೀಲ್ಡ್ ಪ್ರೈವೇಟ್ ಬಸ್ ಸ್ಟ್ಯಾಂಡ್, ಮಳಿಗೆ ನಂ.24, ದಾವಣಗೆರೆ.
96203 05966, 73533 36000

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ಧಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

# ಸದೃಢ ಆರೋಗ್ಯಕ್ಕಾಗಿ ಕ್ರೀಡೆಯಲ್ಲಿ ಪಾಲ್ಗೊಳ್ಳಿ

## ದಾವಿವಿ ಅಂತರ್ ಕಾಲೇಜುಗಳ ಭಾರ ಎತ್ತುವ, ದೇಹದಾರ್ಢ್ಯ ಸ್ಪರ್ಧೆಯಲ್ಲಿ ಕುಲಪತಿ ಪ್ರೊ.ಶರಣಪ್ಪ ಹಲಸೆ



ದಾವಣಗೆರೆ, ಡಿ.15- ದಾವಣಗೆರೆ ವಿಶ್ವ ವಿದ್ಯಾನಿಲಯ ಹಾಗೂ ಶ್ರೀ ಮಂಜುನಾಥ ಸ್ವಾಮಿ ಪ್ರಥಮ ದರ್ಜೆ ಕಾಲೇಜು ಇವರ ಸಂಯುಕ್ತಾಶ್ರಯದಲ್ಲಿ2021-22ನೇ ಸಾಲಿನ ದಾವಣಗೆರೆ ವಿವಿ ಅಂತರ್ ಕಾಲೇಜುಗಳ ಪುರುಷ ಮತ್ತು ಮಹಿಳೆಯರ ಭಾರ ಎತ್ತುವ ಸ್ಪರ್ಧೆ, ದೇಹದಾರ್ಢ್ಯ ಸ್ಪರ್ಧೆಗಳನ್ನು ದಾವಿವಿ ಕುಲಪತಿ ಪ್ರೊ.ಶರಣಪ್ಪ ವಿ. ಹಲಸೆ ಉದ್ಘಾಟಿಸಿದರು.

ಈ ಸಂದರ್ಭದಲ್ಲಿ ಮಾತ ನಾಡಿದ ಕುಲಪತಿಗಳು, ಸದೃಢ ಆರೋಗ್ಯಕ್ಕಾಗಿ ಕ್ರೀಡಾ ಚಟುವಟಿಕೆಗಳಲ್ಲಿ ಭಾಗವಹಿಸುವಂತೆ ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಮಹಾನಗರ ಪಾಲಿಕೆ ಮೇಯರ್ ಎಸ್.ಟಿ. ವೀರೇಶ್, ಪಾಲಿಕೆ ಸದಸ್ಯ ಕೆ.ಎಂ. ವೀರೇಶ್, ಶ್ರೀ ಮಂಜುನಾಥ ಸ್ವಾಮಿ ವಿದ್ಯಾಸಂಸ್ಥೆ ಅಧ್ಯಕ್ಷ ಡಿ.ಸಂದೀಪ್, ಜಿಲ್ಲಾ ವೇಟ್ ಲಿಫ್ಟ್ ಅಸೋಸಿಯೇಷನ್ ಅಧ್ಯಕ್ಷ ಹೆಚ್.ಮಹೇಶ್ ಆಗಮಿಸಿದ್ದರು. ಕಾಲೇಜು ಪ್ರಾಂಶುಪಾಲರಾದ ಡಾ. ಡಿ.ಕೆ. ಅಂಜಿನಪ್ಪ ಉಪಸ್ಥಿತರಿದ್ದರು. ನಿವೃತ್ತ ಪ್ರಾಧ್ಯಾಪಕ ಪ್ರೊ. ದ್ಯಾಮಪ್ಪ ಅಧ್ಯಕ್ಷತೆ ವಹಿಸಿದ್ದರು.ಕಾಲೇಜು ದೈಹಿಕ ಶಿಕ್ಷಣ ನಿರ್ದೇಶಕ ಶಂಕರಪ್ಪ ಉಪಸ್ಥಿತರಿದ್ದರು.

**ಡಿ.ಮಂಜುನಾಥ್ ಮಿಸ್ಟರ್ ದಾವಣಗೆರೆ:** ಸಂಜೆ ನಡೆದ ಕಾರ್ಯಕ್ರಮದ ಸಮಾರೋಪ ಸಮಾರಂಭದಲ್ಲಿ ಡಿವೈಎಸ್ಪಿ ಪಿ.ಬಿ. ಪ್ರಕಾಶ್ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಿದರು. ಡಿ.ಮಂಜುನಾಥ್ ಅವರಿಗೆ ಮಿಸ್ಟರ್ ದಾವಣಗೆರೆ ಎಂಬ ಬಿರುದು ನೀಡಿ ಗೌರವಿಸಲಾಯಿತು.

# 15 ವಿಪ ಸದಸ್ಯರ ದಿನದ ಅಮಾನತ್ತು

**(1ನೇ ಪುಟದಿಂದ)** ಹೊರಟ್ಟಿಯವರು, ಸದನದ ಕಾರ್ಯಕಲಾಪವನ್ನು ನಾಳೆಗೆ ಮುಂದೂಡಿದರು.

ಇದಕ್ಕೂ ಮುನ್ನ ಸರ್ಕಾರದ ಹಾಲಿ ಸಚಿವ ಮತ್ತು ಮಾಜಿ ಸಚಿವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸಲು ನ್ಯಾಯಾಲಯ ಸೂಚಿಸಿರುವ ಕುರಿತು ಚರ್ಚೆಗೆ ಅವಕಾಶ ನೀಡಬೇಕೆಂದು ಪಟ್ಟು ಹಿಡಿದಿದ್ದರು.

ಸಚಿವರ ರಾಜೀನಾಮೆ ವಿಚಾರ ಕೋರಿ ಕಾಂಗ್ರೆಸ್ ವಿರೋಧ ಪಕ್ಷದ ನಾಯಕ ಎಸ್.ಆರ್.ಪಾಟೀಲ್, ನಾರಾಯಣ ಸ್ವಾಮಿ ಅವರು ನಿಲುವಳಿ ಮಂಡಿಸಿದ್ದರು. ನಿಯಮ 59 ರ ಅಡಿಯಲ್ಲಿ ಚರ್ಚೆಗೆ ಅವಕಾಶ ಕೋರಿದರು. ಆದರೆ ನಿಲುವಳಿಯನ್ನು ಬಸವರಾಜ ಹೊರಟ್ಟಿ ತಿರಸ್ಕರಿಸಿದರು.

59 ರ ಬದಲಾಗಿ 63 ಕ್ಕೆ ಬದಲಾಯಿಸಲು ಬರೆದುಕೊಡುವಂತೆ ಹೊರಟ್ಟಿ ಸೂಚನೆ ನೀಡಿದರು. ಆದರೆ ಇದಕ್ಕೆ ಒಪ್ಪದ ಕಾಂಗ್ರೆಸ್ ಸದಸ್ಯರು, ಸದನದ ಬಾವಿಗೆ ಇಳಿದು ಪ್ರತಿಭಟನೆ ನಡೆಸಿದರು. ಕೊನೆಗೂ ಹೊರಟ್ಟಿ ಅವರು ಪ್ರಶ್ನೋತ್ತರ ಮುಗಿದ ಮೇಲೆ ಚರ್ಚೆಗೆ ಅವಕಾಶ ನೀಡಲಾಗುವ ಸೂಚನೆಯನ್ನು ಒಪ್ಪಿದ ಕಾಂಗ್ರೆಸ್ ಸದಸ್ಯರು ಧರಣಿಯನ್ನು ವಾಪಸ್ ಪಡೆದರು.

ಇದಕ್ಕೂ ಮೊದಲು ಕಾಂಗ್ರೆಸ್ ಸದಸ್ಯ ನಾರಾಯಣಸ್ವಾಮಿ ಮಾತನಾಡಿ, ಸರ್ಕಾರದ ಹಾಲಿ ಸಚಿವ ಭೈರತಿ ಬಸವರಾಜು, ಮಾಜಿ ಸಚಿವ ಶಂಕರ್ ಮೇಲೆ ಐಪಿಸಿ ಸೆಕ್ಷನ್ 420 ಸೇರಿದಂತೆ, ಇನ್ನಿತರೆ ಸೆಕ್ಷನ್‌ಗಳಡಿ ಕ್ರಿಮಿನಲ್ ಮೊಕದ್ದಮೆ ದಾಖಲಿಸಲು ಕೋರ್ಟ್ ಆದೇಶಿಸಿದೆ. ಹೀಗಾಗಿ, ಇದೊಂದು ನಾಲಾಯಕ್ ಸರ್ಕಾರವಾಗಿದ್ದು, ಸಚಿವರೂ, ಸರ್ಕಾರವೂ ರಾಜೀನಾಮೆ ನೀಡಬೇಕೆಂದು ಪಟ್ಟು ಹಿಡಿದರು.

ಎಸ್.ಆರ್.ಪಾಟೀಲ್ ಅವರು, ಇದೊಂದು ಪ್ರಮುಖ ವಿಚಾರವಾಗಿದ್ದು, ಕೂಲಂಕುಶವಾಗಿ ಚರ್ಚೆ ನಡೆಸಲು ಅವಕಾಶ ಕಲ್ಪಿಸಬೇಕು ಎಂದು ಸಭಾಪತಿ ಬಳಿ ಬೇಡಿಕೆಯಿಟ್ಟರು.

ಇದಕ್ಕೆ ಸಮಾಜಾಯಿಷಿ ನೀಡಿದ ಆರ್.ಅಶೋಕ್, ಸಚಿವರ ಮೇಲಿನ ಮೊಕದ್ದಮೆ ವಿಚಾರ ಕೋರ್ಟಿನಲ್ಲಿ ಇದೆ. ಹಾಗಾಗಿ, ಪ್ರತಿಭಟನೆ ಹಿಂಪಡೆದು ಸಭಾಪತಿ ಆದೇಶ ಪಾಲಿಸಿ ಎಂದು ನುಡಿದರು. ಕೊನೆಯದಾಗಿ ಬಸವರಾಜ ಹೊರಟ್ಟಿ ಅವರು, ಇದೆಲ್ಲ ರೆಕಾರ್ಡ್‌ಗೆ ಹೋಗಬಾರದು ಎಂದು ಸೂಚನೆ ನೀಡಿದರು.

# ಅಭಿವೃದ್ಧಿ ನಿಲ್ಲಿಸಿ ರೈತರಿಗೆ ನೆರವಾಗಿ

**(1ನೇ ಪುಟದಿಂದ)** ಬರುವವರೆಗೂ ನೀವು ಕಾಯುತ್ತಾ ಕೂರಬೇಡಿ. ಸರ್ಕಾರ ಹಮ್ಮಿಕೊಂಡಿರುವ ಯೋಜನೆಗಳೆಲ್ಲವನ್ನು ತಾತ್ಕಾಲಿಕ ವಾಗಿ ಮುಂದೂಡಿ. ನಿಮ್ಮಲ್ಲಿರುವ ಹಣವನ್ನು ಪರಿಹಾರಕ್ಕೆ ಬಳಸಿಕೊಳ್ಳಿ ಎಂದು ಹೇಳಿದ್ದಾರೆ.

ನೀವು ನೆರವಿಗೆ ಬರದಿದ್ದರೆ, ರೈತ ಬೀದಿ ಪಾಲಾಗುತ್ತಾನೆ. ಲಕ್ಷಾಂತರ ಹೆಕ್ಟೇರ್ ಭೂಮಿಯಲ್ಲಿ ಬೆಳೆದ ಬೆಳೆ ಹೊಲದಲ್ಲೇ ಕೊಳೆತಿದೆ. ಇಲ್ಲವೇ ಮೊಳಕೆ ಒಡೆದಿದೆ. ಅವನ ಕರುಣಾಜನಕ ಸ್ಥಿತಿ ನೋಡಲಾಗದು. ಮೀನಾಮೇಷ ಎಣಿಸಬೇಡಿ ಎಂದರು.

ರೈತ, ಕೂಲಿ ಕಾರ್ಮಿಕರು ಕಂಗಾಲಾಗಿದ್ದಾರೆ. ಅವರಿಗೆ ರೋಜ್‌ಗಾರ್ ಯೋಜನೆಯಡಿ ಹೆಚ್ಚಿನ ಕೆಲಸ ಕೊಡಿ, ಅವರು ಮಾಡಿರುವ ಕೆಲಸದ ಬಾಕಿ ಕೂಲಿಯನ್ನು ತಕ್ಷಣವೇ ಬಿಡುಗಡೆ ಮಾಡಿ.

ಮಾಡಿರುವ ಕೆಲಸಕ್ಕೆ ಕೂಲಿ ಕೊಡದಿದ್ದರೆ, ಅವನು ಎಲ್ಲಿ ಹೊಟ್ಟೆ ತುಂಬಿಕೊಳ್ಳುತ್ತಾನೆ? ಇದು ಸಾಮಾನ್ಯ ಜ್ಞಾನ. ಅರ್ಥ ಮಾಡಿಕೊಂಡು ಮುಖ್ಯಮಂತ್ರಿಗಳು ಹಾಗೂ ಕಂದಾಯ ಸಚಿವರು ಪರಿಹಾರ ಕಲ್ಪಿಸಬೇಕೆಂದು ಆಗ್ರಹಿಸಿದರು.

ಯಡಿಯೂರಪ್ಪ ಅವರ ಮಾತಿಗೆ ಆಡಳಿತ ಮತ್ತು ವಿರೋಧ ಪಕ್ಷದ ಸದಸ್ಯರು ಧ್ವನಿಗೂಡಿಸಿದರು. ಇದಕ್ಕೆ ಬೆಂಬಲವಾಗಿ ನಿಂತ ಜೆಡಿಎಸ್‌ನ ಶಿವಲಿಂಗೇಗೌಡ ಸತತವಾಗಿ 90 ದಿನಗಳ ಕಾಲ ಅಕಾಲಿಕ ಮಳೆ ಬಿದ್ದಿದ್ದರಿಂದ ಇಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಈ ಅವಧಿಯಲ್ಲಿ 200 ರಿಂದ 400 ಮಿಲಿ ಮೀಟರ್ ಮಳೆ ಬಿದ್ದು, ಕೊಯ್ಲಿಗೆ ಬಂದ ಬೆಳೆ ರೈತನ ಕೈ ಸೇರದೆ ಆಕಾಶ ನೋಡುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ ಎಂದರು.

ಎನ್‌ಡಿಆರ್‌ಎಫ್ ಅಡಿ ಪ್ರತಿ ಹೆಕ್ಟೇರ್‌ಗೆ 6,500 ರೂ. ನೀಡುತ್ತೀರಿ. ಅದು ಏನಕ್ಕೂ ಸಾಲದು. ರಾಗಿ ಬೆಳೆಗೆ ಪ್ರತಿ ಹೆಕ್ಟೇರ್‌ಗೆ 35 ಸಾವಿರ ರೂ. ವೆಚ್ಚವಾಗುತ್ತದೆ. ಎನ್‌ಡಿಆರ್‌ಎಫ್ ನಿಯಮವನ್ನು ಬದಿಗಿಟ್ಟು, ಹೆಚ್ಚು ಪರಿಹಾರ ನೀಡಿ, ಇನ್ನು ಮುಂದೆ ಬೆಳೆ ವಿಮೆಯನ್ನು ಕಡ್ಡಾಯ ಮಾಡಿ, ಇಲ್ಲದಿದ್ದರೆ ಸರ್ಕಾರವೇ ವಿಮೆ ಕಟ್ಟಲಿ ಎಂದು ಒತ್ತಾಯಿಸಿದರು.

# ಕಾಬುಲ್‌ಗೆ ಬರುವಂತೆ ಆಹ್ವಾನಿಸಿತ್ತು !

**(1ನೇ ಪುಟದಿಂದ)** ಸಿಲುಕಬಾರದು ಎಂಬ ಕಾರಣಕ್ಕಾಗಿ ತಾಲಿಬಾನ್‌ಗಳಿಗೆ ಆಹ್ವಾನ ನೀಡಲಾಗಿತ್ತು. ದೇಶ ಲೂಟಿಕೋರರ ಪಾಲಾಗಬಾರದು ಎಂಬ ಕಾರಣಕ್ಕೆ ಈ ನಿರ್ಧಾರ ತೆಗೆದುಕೊಳ್ಳಲಾಗಿತ್ತು ಎಂದು ಕರ್ಜಾಯಿ ತಿಳಿಸಿದ್ದಾರೆ.

ಘನಿ ದೇಶ ಬಿಟ್ಟು ಹೋದ ನಂತರ ಭದ್ರತಾ ಅಧಿಕಾರಿಗಳೂ ಸಹ ತೊರೆದಿದ್ದರು. ಆಗ ಆಫ್ಘಾನ್ ರಕ್ಷಣಾ ಸಚಿವರಾಗಿದ್ದ ಬಿಸ್ಮಿಲ್ಲಾ ಖಾನ್ ಅವರು ನನಗೆ ಕಾಬುಲ್ ತೊರೆಯುವ ಬಗ್ಗೆ ಕೇಳಿದ್ದರು. ನಂತರದಲ್ಲಿ ವಿಚಾರಿಸಿದಾಗ ಕಾಬುಲ್ ಪೊಲೀಸ್ ಮುಖ್ಯಸ್ಥ ಸಹ ಅಲ್ಲಿ ಉಳಿಯುವುದಿಲ್ಲ ಎಂಬುದು ಗೊತ್ತಾಯಿತು ಎಂದಿದ್ದಾರೆ. ಕರ್ಜಾಯಿ 13 ವರ್ಷಗಳ ಕಾಲ ಆಫ್ಘಾನಿಸ್ತಾನದ ಅಧ್ಯಕ್ಷರಾಗಿದ್ದರು.

ಕಳೆದ ಆಗಸ್ಟ್ 15ರ ವೇಳೆಗೆ ತಾಲಿಬಾನ್ ಕಾಬುಲ್ ಹೊರ ವಲಯಕ್ಕೆ ಬಂದು ನಿಂತಿತ್ತು. ಒಪ್ಪಂದ ಮಾಡಿಕೊಳ್ಳುವವರೆಗೆ ತಾಲಿಬಾನ್ ಹೋರಾಟಗಾರರು ನಗರದ ಹೊರಗೆ ಇರಲಿದ್ದಾರೆ ಎಂಬ ಭಾವನೆ ಇತ್ತು. ನಗರದ ಒಳಗೆ ಬರುವ ಉದ್ದೇಶ ಇಲ್ಲ ಎಂದು ತಾಲಿಬಾನ್ ಸಹ ತಿಳಿಸಿತ್ತು ಎಂದು ಕರ್ಜಾಯಿ ಹೇಳಿದ್ದಾರೆ. ಆದರೆ, ಮಧ್ಯಾಹ್ನದ ವೇಳೆಗೆ ಘನಿ ನಗರ ಬಿಟ್ಟು ಓಡಿ ಹೋಗುವ ಸೂಚನೆಗಳು ದೊರೆತಿದ್ದವು. ಆಗ ರಕ್ಷಣಾ ಸಚಿವರಿಗೆ ಕರೆ ಮಾಡಿದಾಗ, ಕಾಬುಲ್‌ನಲ್ಲಿ ಸರ್ಕಾರ ಎಂಬುದೇ ಉಳಿದಿಲ್ಲ. ಪೊಲೀಸ್ ಮುಖ್ಯಸ್ಥ ಸೇರಿದಂತೆ ಎಲ್ಲರೂ ಬಿಟ್ಟು ಹೋಗಿದ್ದಾರೆ ಎಂಬುದು ಗೊತ್ತಾಯಿತು ಎಂದು ಕರ್ಜಾಯಿ ತಿಳಿಸಿದ್ದಾರೆ.

ಘನಿ ಅವರ ರಕ್ಷಣಾ ಘಟಕದ ಉಪ ಮುಖ್ಯಸ್ಥರು ನನಗೆ ಕರೆ ಮಾಡಿ, ಅಧ್ಯಕ್ಷ ಸ್ಥಾನ ವಹಿಸಿಕೊಳ್ಳಲು ಕೇಳಿದ್ದರು. ಆದರೆ, ಕಾನೂನುಬದ್ಧವಾಗಿ ಈ ಹುದ್ದೆ ವಹಿಸಿಕೊಳ್ಳುವುದು ಸೂಕ್ತವಲ್ಲ ಎಂಬ ನಿರ್ಧಾರಕ್ಕೆ ಬಂದಿದ್ದೆ ಎಂದು ಕರ್ಜಾಯಿ ಹೇಳಿದ್ದಾರೆ.

# ಕನ್ನಡಕ್ಕೆ ಆದ್ಯತೆ ನೀಡದಿದ್ದರೆ ಪರವಾನಿಗೆ ರದ್ದು

**(1ನೇ ಪುಟದಿಂದ)** ಸರ್ಕಾರದ ಆದೇಶ ಪಾಲಿಸಲು ಜಾಗೃತಿ ಮೂಡಿಸಲಿದೆ. ಇದಕ್ಕೂ ಸ್ಪಂದಿಸದ ಅಂಗಡಿಗಳ ಮಾಲೀಕರ ಮೇಲೆ ದಂಡ, ಅದಕ್ಕೂ ಮೀರಿದಲ್ಲಿ ಅಂಗಡಿಗಳ ಪರವಾನಿಗೆ ರದ್ದು ಮಾಡಲಾಗುವುದು ಎಂದು ಎಚ್ಚರಿಕೆ ನೀಡಿದರು.

ನಗರ ಪಾಲಿಕೆ ವತಿಯಿಂದ ಪರವಾನಿಗೆ ಪಡೆದ ಜಾಹೀರಾತಿನ ಫಲಕಗಳಿಗೂ ಸರ್ಕಾರದ ಆದೇಶ ಅನ್ವಯವಾಗಲಿದ್ದು, ಕನ್ನಡ ಭಾಷೆ ಬಳಕೆ ಕಡ್ಡಾಯವಾಗಬೇಕು. ಈ ವಿಚಾರವಾಗಿ ಪಾಲಿಕೆಯಿಂದ ಸೂಚನೆ ನೀಡಿದ್ದು, ಅಂತಹ ಜಾಹೀರಾತಿನಲ್ಲಿ ಕನ್ನಡ ಇಲ್ಲದಿದ್ದಲ್ಲಿ ಅದಕ್ಕೂ ಕ್ರಮ ಜರುಗಿಸಲಾಗುವುದು ಎಂದರು.

ದೊಡ್ಡ ಅಂಗಡಿಗಳ ಮಾಲೀಕರು ಫುಟ್ ಪಾತ್ ಆಕ್ರಮಿಸಿಕೊಂಡು ವಸ್ತುಗಳನ್ನು ಇಟ್ಟು ಮಾರಾಟ ಮಾಡುತ್ತಿದ್ದು, ಅವುಗಳನ್ನು ತಕ್ಷಣವೇ ತೆರವುಗೊಳಿಸುವಂತೆ ಸೂಚಿಸಲಾಗಿದೆ. ಇನ್ನೂ ಏವಿಕೆ ರಸ್ತೆ ಸೇರಿದಂತೆ, ಹಲವೆಡೆ ಫುಟ್‌ಪಾತ್ ವ್ಯಾಪಾರಿಗಳು ರಸ್ತೆಯಲ್ಲಿ ವ್ಯಾಪಾರ ನಡೆಸುತ್ತಿದ್ದು, ಅವರಿಗೆ ಮಾನವೀಯತೆ ದೃಷ್ಟಿಯಿಂದ ಕಾಲಾವಕಾಶ ನೀಡಿದ್ದು, ಅವರಿಗೆ ಪರ್ಯಾಯ ವ್ಯವಸ್ಥೆ ಕಲ್ಪಿಸಲಾಗುವುದು ಎಂದು ಹೇಳಿದರು.

ಈ ವೇಳೆ ಪಾಲಿಕೆ ಸದಸ್ಯರುಗಳಾದ ಕೆ.ಎಂ. ವೀರೇಶ್, ಸ್ವಾಗಿ ಶಾಂತಕುಮಾರ್, ಪಾಲಿಕೆ ಅಧಿಕಾರಿಗಳಾದ ಸಂತೋಷ್ ಕುಮಾರ್, ನಿಖಿಲ್, ರೆಹಮತ್, ನೀಲಪ್ಪ, ಶಶಿಧರ್, ಹೊನ್ನಪ್ಪ, ಮಲ್ಲಿಕಾ ಗುಡಿಕೋಟೆ, ಹೆಚ್. ಉಷಾ, ಜಯಪ್ರಕಾಶ್, ರಾಘವೇಂದ್ರ ಸೇರಿದಂತೆ ಇತರರು ಇದ್ದರು.

## ಮಾಸ್ಕ್ ಜಾಗೃತಿ-ದಂಡ : ವಾಗ್ವಾದ

ಮಾಸ್ಕ್ ಧರಿಸದೇ ರಸ್ತೆಯಲ್ಲಿ ತಿರುಗಾಡುತ್ತಿದ್ದ ಸಾರ್ವಜನಿಕರಿಗೆ ಪಾಲಿಕೆ ಅಧಿಕಾರಿಗಳಿಂದಲ್ಲೂ ದಂಡದ ಬಿಸಿ ತಟ್ಟಿತು. ಮೇಯರ್ ಎಸ್.ಟಿ. ವೀರೇಶ್ ಅವರು ಪಾಲಿಕೆ ಅಧಿಕಾರಿಗಳ ತಂಡದೊಂದಿಗೆ ಕನ್ನಡ ನಾಮಫಲಕಗಳ ಜಾಗೃತಿ ಜೊತೆಗೆ, ಸಾರ್ವಜನಿಕವಾಗಿ ಮಾಸ್ಕ್ ಧರಿಸದವರಿಗೂ ದಂಡ ವಿಧಿಸಿ, ಕೊರೊನಾ ಹಿನ್ನೆಲೆಯಲ್ಲಿ ಮುಂಜಾಗ್ರತೆ ವಹಿಸುವಂತೆ ಜಾಗೃತಿ ಮೂಡಿಸಿದರು.

ಈ ವೇಳೆ ಮಾಸ್ಕ್ ಧರಿಸದೇ ಬೈಕ್ ನಲ್ಲಿ ಬಂದ ವ್ಯಕ್ತಿಗೆ ದಂಡ ವಿಧಿಸಲು ಮುಂದಾದಾಗ, ಆತ ದಂಡ ಪಾವತಿಸಲು ಸಿದ್ಧನಾಗಿದ್ದ. ಆದರೆ, ಮಾಸ್ಕ್ ಧರಿಸದೇ ಬಂದ ಮತ್ತೋರ್ವ ಬೈಕ್ ಸವಾರನಿಗೆ ದಂಡ ವಿಧಿಸದೇ ಹಾಗೆಯೇ ಕಳಿಸಿದ ಕಾರಣಕ್ಕೆ, ಆ ವ್ಯಕ್ತಿಯು ಪಾಲಿಕೆ ಅಧಿಕಾರಿಗಳ ಕ್ರಮಕ್ಕೆ ವಿರೋಧ ವ್ಯಕ್ತಪಡಿಸಿ, ವಾಗ್ವಾದ ನಡೆಸಿದನು. ಒಬ್ಬರಿಗೆ ದಂಡ ವಿಧಿಸುವುದು, ಇನ್ನೊಬ್ಬರಿಗೆ ಹಾಗೆಯೇ ಬಿಡುವುದು ಸರಿಯಲ್ಲ. ನಾನು ಯಾವುದೇ ಕಾರಣಕ್ಕೂ ದಂಡ ಕೊಡಲ್ಲ ಎಂದು ಪಟ್ಟು ಹಿಡಿದ. ಆಗ ಅಲ್ಲಿಯೇ ಇದ್ದ ಮೇಯರ್ ಎಸ್.ಟಿ. ವೀರೇಶ್ ಆ ವ್ಯಕ್ತಿಗೆ ತಿಳಿ ಹೇಳಿ ಪರಿಸ್ಥಿತಿ ತಿಳಿಗೊಳಿಸಿದರು.

# ಹೊನ್ನಾಳಿಯಲ್ಲಿ ವೀರಭದ್ರೇಶ್ವರ ಶರಭಿ ಗುಗ್ಗುಳ - ಕಾರ್ತಿಕೋತ್ಸವ



ಹೊನ್ನಾಳಿ, 15- ಪಟ್ಟಣದ ಪೇಟೆ ಶ್ರೀ ವೀರಭದ್ರೇಶ್ವರ ಸ್ವಾಮಿ ದೇವಸ್ಥಾನದಲ್ಲಿ 15ನೇ ವರ್ಷದ ಶರಭಿ ಗುಗ್ಗುಳ ಮತ್ತು ಕಾರ್ತಿಕೋತ್ಸವ ವಿಜೃಂಭಣೆಯಿಂದ ನಡೆಯಿತು.

ಹಿರೇಕಲ್ಮಠದ ಒಡೆಯರ್ ಡಾ. ಚನ್ನಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮೀಜಿ ಸಾನ್ನಿಧ್ಯದಲ್ಲಿ ನಿನ್ನೆ ಶ್ರೀ ಸ್ವಾಮಿಗೆ ರುದ್ರಾಭಿಷೇಕ ನೆರವೇರಿಸಿದ ಬಳಿಕ ಶರಭಿ ಗುಗ್ಗುಳ ಮಹೋತ್ಸವವು ವೀರಗಾಸೆ ಮಂಗಳ ವಾದ್ಯಗಳೊಂದಿಗೆ ಪಟ್ಟಣದ ಪ್ರಮುಖ ರಾಜಬೀದಿಗಳಲ್ಲಿ ಸಂಚರಿಸಿ, ನಂತರ ತುಂಗಭದ್ರಾ ನದಿಯಲ್ಲಿ ವಿಸರ್ಜಿಸಲಾಯಿತು. ದಾವಣಗೆರೆಯ ಪುರವಂತರಾದ ಜಗದೀಶ್ ಮತ್ತು ಸಂಗಡಿಗರು ನೇತೃತ್ವ ವಹಿಸಿದ್ದರು.

ಅರ್ಚಕ ಕುಮಾರ, ಬೆನಕಯ್ಯಶಾಸ್ತ್ರಿ, ದೇವಸ್ಥಾನ ಸಮಿತಿಯ ಪದಾಧಿಕಾರಿಗಳಾದ ಪಟ್ಟಣಶೆಟ್ಟಿ ರುದ್ರಪ್ಪ, ಪಟ್ಟಣಶೆಟ್ಟಿ ಪರಮೇಶ್, ಪಟ್ಟಣಶೆಟ್ಟಿ ವಿಜಯಕುಮಾರ, ಬೆನಕನಹಳ್ಳಿ ವೀರಣ್ಣ, ಕುಂಬಾರ ಮುರುಗೇಶ್, ಕುಂಬಾರ ಬಸವರಾಜ, ಹಳಕಟ್ಟಿ ಗಂಗಾಧರ, ಹಳಕಟ್ಟಿ ಶಿವುಕುಮಾರ, ಹೋಟೆಲ್ ಗಿರೀಶ್, ಪೇಟೆ ಪ್ರಶಾಂತ, ಅಡುಗೆ ವೀರಣ್ಣ ಮತ್ತಿತರರಿದ್ದರು.

# ಸಂಸ್ಥೆಗೆ 80 ನಿಯಮ

**(1ನೇ ಪುಟದಿಂದ)** ಬೇಡಿಕೆ ಈಡೇರಿಸದಿದ್ದರೆ ಮುಂದಿನ ದಿನಗಳಲ್ಲಿ ಉಗ್ರವಾಗಿ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದು ಎಂದು ಪ್ರತಿಭಟನಾಕಾರರು ಎಚ್ಚರಿಸಿದ್ದಾರೆ.

ಈ ಸಂದರ್ಭದಲ್ಲಿ ನೀಲಗುಂದ ಗುಡ್ಡದ ವಿರಕ್ತಮಠದ ಶ್ರೀ ಚನ್ನಬಸವ ಶಿವಯೋಗಿಗಳು, ಅರಸಿಕೇರಿ ಕೋಲಶಾಂತೇಶ್ವರ ಮಠದ ಶ್ರೀ ಶಾಂತಲಿಂಗ ದೇಶಿಕೇಂದ್ರ ಮಹಾಸ್ವಾಮೀಜಿ, ಕೂಲಹಳ್ಳಿ ಪಟ್ಟದ ಶ್ರೀ ಚಿನ್ಮಯಿ ಸ್ವಾಮೀಜಿ, ಅಡವಿಹಳ್ಳಿ ಶ್ರೀ ಸದ್ಗುರು ಶಿವಯೋಗಿ ವೀರಗಂಗಾಧರ ಹಾಲಸ್ವಾಮೀಜಿ, ನಿಚ್ಚವ್ವನಹಳ್ಳಿ ಶ್ರೀ ಹಾಲಸ್ವಾಮೀಜಿ, ಮುಸ್ಲಿಂ ಧಾರ್ಮಿಕ ಮುಖಂಡ ಮೌಲಾನಾ ಅಬ್ದುಲ್ ವಹಾಬ್‌ಸಾಬ್, ಲೋಕೇಶ್ ತಾಳಿಕಟ್ಟೆ, ಸಂಚಾಲಕ ಸುನಿಲ್ ಹುಡಗಿ, ಮುನಿಯಪ್ಪ, ಗುಂಡಗತ್ತಿ ಕೊಟ್ರಪ್ಪ, ಉಮಾಶಂಕರ್, ರವಿ ಅಧಿಕಾರ್, ಬಸವರಾಜ ಕೊಂಡಜ್ಜಿ, ಶಾಹಿದ್ ತಹಶೀಲ್ದಾರ್, ಮಂಜುನಾಥ ಪೂಜಾರ, ಸಿ. ಬಸವರಾಜ್, ನಂಜಪ್ಪ,ದಾದಾಪೀರ್, ಅರುಣ ಪೂಜಾರ್, ಕೆ.ವಿರೂಪಾಕ್ಷಪ್ಪ. ನಾರಾಯಣ, ಚನ್ನೇಶ, ಅನ್ನಪೂರ್ಣ, ಮಲ್ಲಿಕಾರ್ಜುನ ಸ್ವಾಮಿ, ಆನಂದ್ ಸೇರಿದಂತೆ, ಇತರರು ಇದ್ದರು.

# ನಕಲಿ ಫೇಸ್ ಬುಕ್ ಖಾತೆ

**(1ನೇ ಪುಟದಿಂದ)** ಎಂದೆಲ್ಲಾ ಸಂದೇಶಗಳನ್ನು ಕಳಿಸಿದ್ದಾರೆ. ಅಲ್ಲದೇ ನಂತರ ನನಗೊಂದು ಸಣ್ಣ ತೊಂದರೆ ಆಗಿದೆ. ನಿಮ್ಮ ಬಳಿ ಫೋನ್ ಪೇ ಇದೆಯೇ ಎಂದು ಕೇಳಿ ನನಗೆ 48 ಸಾವಿರ ರೂ. ತುರ್ತಾಗಿ ಬೇಕಾಗಿದ್ದು, ತಕ್ಷಣವೇ ಕಳಿಸುವಂತೆ ಅಲ್ಲದೇ, 2 ತಾಸಿನಲ್ಲೇ ವಾಪಾಸ್ ಕೊಡುವುದಾಗಿ ಮೆಸೇಜ್ ಮಾಡಿದ್ದಾರೆ.

ನನ್ನ ಸ್ನೇಹಿತನಿಗೆ ವೈದ್ಯಕೀಯ ತುರ್ತಿನಿಂದಾಗಿ ಹಣದ ಅಗತ್ಯವಿದೆ ಎಂದಿದ್ದಾರೆ. ನಂತರ ಈ ಬಗ್ಗೆ ತಿಳಿದ ಕೆಲವರು ಯಾರು ನೀವು, ನಿಮ್ಮ ಫೋಟೋ ಕಳಿಸಿ ಎಂದು ಪ್ರಶ್ನಿಸಿದ್ದಾರೆ. ಈ ವೇಳೆ ನಕಲಿ ಫೇಸ್ ಬುಕ್ ಖಾತೆ ಸೃಷ್ಟಿಸಿರುವ ವ್ಯಕ್ತಿ ಇಲ್ಲಿಗೇ ಇದನ್ನು ಬಿಟ್ಟುಬಿಡಿ ಎಂದಿದ್ದಾರೆ. ಆದರೂ ಬಿಡದೇ ಯಾರು ನೀವು ಎಲ್ಲಿದ್ದೀರಾ? ಎಂದು ಮರು ಪ್ರಶ್ನಿಸಿದಾಗ, ಅತ್ತ ಕಡೆಯಿಂದ ಯಾವುದೇ ಮೆಸೇಜ್ ಬಂದಿಲ್ಲ ಎನ್ನಲಾಗಿದೆ.

ಈ ನಕಲಿ ಖಾತೆಗೆ ಯಾವುದೇ ರೀತಿ ಹಣವನ್ನು ವರ್ಗಾವಣೆ ಮಾಡಬಾರದು ಎಂದು ಕಾಂಗ್ರೆಸ್ ಮುಖಂಡರು ಮನವಿ ಮಾಡಿದ್ದಾರೆ.

# ನಗರದಲ್ಲಿ ಇಂದು ಚೌಡಾಂಬಿಕಾ ದೇವಿಯ ಕೃತಿ ಬಿಡುಗಡೆ

'ಶ್ರೀ ಚೌಡಾಂಬಿಕಾ ದೇವಿಯ ಇತಿಹಾಸ ಮತ್ತು ದಿವ್ಯ ಅನುಗ್ರಹ' ಕೃತಿಯು ಚೌಡಾಂಬಿಕಾ ದೇವಿ ರಸ್ತೆಯಲ್ಲಿರುವ ಚೌಡೇಶ್ವರಿ ಕಾಂಪ್ಲೆಕ್ಸ್‌ನ ಮೊದಲನೇ ಮಹಡಿಯ ಗುರುಮಂದಿರ ಸಭಾಂಗಣದಲ್ಲಿ ಇಂದು ಸಂಜೆ 4 ಕ್ಕೆ ಬಿಡುಗಡೆಯಾಗಲಿದೆ. ಶ್ರೀ ಶ್ರೀಧರ ಸೇವಾ ಟ್ರಸ್ಟ್ ವತಿಯಿಂದ ಈ ಕಾರ್ಯಕ್ರಮ ಏರ್ಪಾಡಾಗಿದೆ ಎಂದು ಮೈಸೂರಿನ ಎಸ್. ಎನ್. ಪಾರ್ಥನಾಥ್ ಮತ್ತು ಶ್ರೀಮತಿ ಉಮಾ ಪಾರ್ಥನಾಥ್ ತಿಳಿಸಿದ್ದಾರೆ.

# ಮಲೇಬೆನ್ನೂರು ಪುರಸಭೆ ಚುನಾವಣೆ : 61 ನಾಮಪತ್ರ ಸಲ್ಲಿಕೆ

ಮಲೇಬೆನ್ನೂರು, ಡಿ.15- ಇಲ್ಲಿನ ಪುರಸಭೆಯ ಎಲ್ಲಾ 23 ವಾರ್ಡ್‌ಗಳಿಗೆ ಇದೇ ದಿನಾಂಕ 27 ರಂದು ಚುನಾವಣೆ ನಡೆಯಲಿದ್ದು, ನಾಮಪತ್ರ ಸಲ್ಲಿಸಲು ಕೊನೆಯ ದಿನವಾದ ಇಂದು ಒಟ್ಟು 61 ನಾಮಪತ್ರಗಳು ಸಲ್ಲಿಕೆಯಾಗಿವೆ. 22 ವಾರ್ಡ್‌ಗಳಲ್ಲಿ ಕಾಂಗ್ರೆಸ್, 20 ವಾರ್ಡ್‌ಗಳಲ್ಲಿ ಜೆಡಿಎಸ್, 14 ವಾರ್ಡ್‌ಗಳಲ್ಲಿ ಬಿಜೆಪಿ ಮತ್ತು ಒಂದು ವಾರ್ಡ್‌ನಲ್ಲಿ ಎಸ್‌ಡಿಪಿಐ ಹಾಗೂ 3 ವಾರ್ಡ್‌ಗಳಲ್ಲಿ ಮೂವರು ಪಕ್ಷೇತರರಾಗಿ ನಾಮಪತ್ರ ಸಲ್ಲಿಸಿದ್ದಾರೆ.

# ಇಂದು, ನಾಳೆ ಬ್ಯಾಂಕ್ ಮುಷ್ಕರ

**(1ನೇ ಪುಟದಿಂದ)** ಬ್ಯಾಂಕ್ ಕಾರ್ಮಿಕ ಸಂಘಟನೆಗಳ ಸಂಯುಕ್ತ ವೇದಿಕೆಯ ಎಲ್ಲಾ ಸದಸ್ಯರು, ನಿವೃತ್ತ ಬ್ಯಾಂಕ್ ಉದ್ಯೋ ಗಿಗಳ ಒಕ್ಕೂಟದ ಸದಸ್ಯರು, ಪಿಗ್ಮಿ ಸಂಗ್ರಹಕಾರರು ಭಾಗವಹಿಸಿ, ಸರ್ಕಾರದ ಬ್ಯಾಂಕ್ ಖಾಸಗೀಕರಣ ನಡೆಯನ್ನು ಹಿಮ್ಮೆಟ್ಟಿಸಬೇಕಾಗಿ ಜಿಲ್ಲಾ ಸಂಚಾಲಕ ಕೆ.ಎನ್.ಗಿರಿರಾಜ್ ತಿಳಿಸಿದ್ದಾರೆ.

# ಆಭರಣ ಜ್ಯುವೆಲ್ಲರ್ಸ್‌ನಿಂದ ಚಿನ್ನಾಭರಣಗಳ ಪ್ರದರ್ಶನ



ದಾವಣಗೆರೆ, ಡಿ. 15-'ಆಭರಣ ಜ್ಯುವೆಲ್ಲರ್ಸ್' ವತಿಯಿಂದ ಚಿನ್ನ ಮತ್ತು ವಜ್ರಾಭರಣಗಳ ಪ್ರದರ್ಶನ ಮತ್ತು ಮಾರಾಟವು ನಗರದ ಹೋಟೆಲ್ ಸದರ್ನ್ ಸ್ಟಾರ್‌ನಲ್ಲಿ ನಡೆಯುತ್ತಿದೆ. ನಾಳೆ ಗುರುವಾರ ಕೊನೆಯ ದಿನವಾಗಿದೆ. ಆಕರ್ಷಕ ಶ್ರೇಣಿಯ ಅತ್ಯುತ್ತಮ ಕರಕುಶಲದ ಆಭರಣಗಳನ್ನು ಪ್ರದರ್ಶಿಸ ಲಾಗುತ್ತದೆ. ಗುಣಮಟ್ಟದ ವಜ್ರಗಳನ್ನು ಪೋಣಿಸಿದ ವಜ್ರಾಭರಣಗಳೂ ಸಹ ಇವೆ.

# ಸರಸ್ವತಿ ಸ್ವಾಮೀಜಿ ಇನ್ನಿಲ್ಲ

**(1ನೇ ಪುಟದಿಂದ)** ಶರೀರವನ್ನು ನಾಳೆ ದಿನಾಂಕ 16ರ ಗುರುವಾರ ಬೆಳಿಗ್ಗೆ 10 ರಿಂದ ಶ್ರೀ ಜ್ಞಾನಾನಂದ ಆಶ್ರಮದಲ್ಲಿ ಇರಿಸಲಾಗುತ್ತದೆ. ನಂತರ ಮಧ್ಯಾಹ್ನ 3 ಗಂಟೆಗೆ ಶ್ರೀ ಜ್ಞಾನಾನಂದ ಆಶ್ರಮದ ಆವರಣದಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಗುತ್ತದೆ ಎಂದು ಆಶ್ರಮದ ಪ್ರಕಟಣೆ ತಿಳಿಸಿದೆ.

ಶ್ರೀ ಸ್ವಾಮಿ ಶಿವಾತ್ಮಾನಂದ ಸರಸ್ವತಿ ಸ್ವಾಮೀಜಿ ನಿಧನಕ್ಕೆ ಜಿಲ್ಲಾ ವಿಶ್ವಕರ್ಮ ಸಮಾಜದ ಅಧ್ಯಕ್ಷ ಬಸಾಪುರದ ನಾಗೇಂದ್ರಚಾರ್, ಪ್ರಧಾನ ಕಾರ್ಯದರ್ಶಿ ಬಿ.ವಿ. ಶಿವಾನಂದ್, ಮುಖಂಡರುಗಳಾದ ಬಿ.ವಿ. ರಾಜಶೇಖರ, ಆರ್. ಜಕಣಾಚಾರಿ, ಪ್ರಸನ್ನಕುಮಾರ, ಬೇತೂರು ವಿಜಯಕುಮಾರ್, ಸಿದ್ಧಾಚಾರ್, ಶಂಭುಲಿಂಗ ಕಮ್ಮಾರ, ಪ್ರಕಾಶಚಾರ್ ಮತ್ತು ಇತರರು ಕಂಬನಿ ಮಿಡಿದಿದ್ದಾರೆ.

# ನಗರದಲ್ಲಿ ನಾಡಿದ್ದು ಶ್ರೀ ಮರುಳಸಿದ್ಧೇಶ್ವರ ಕಾರ್ತಿಕೋತ್ಸವ

ದಾವಣಗೆರೆ, ಡಿ.15- ನಗರದ ತರಳಬಾಳು ಬಡಾವಣೆಯ ಶ್ರೀ ಶಿವಕುಮಾರಸ್ವಾಮಿ ಮಹಾಮಂಟಪದಲ್ಲಿ ಇದೇ ದಿನಾಂಕ 18 ರ ಶನಿವಾರ ಸಂಜೆ 6.30ಕ್ಕೆ ವಿಶ್ವಬಂಧು ಶ್ರೀ ಮರುಳಸಿದ್ಧೇಶ್ವರ ಕಾರ್ತಿಕೋತ್ಸವ ಸಮಿತಿಯಿಂದ ಕಾರ್ತಿಕೋತ್ಸವ ನಡೆಯಲಿದೆ.

ಅಂದು ಶ್ರೀ ಸ್ವಾಮಿಯ ಶಿಲಾಮೂರ್ತಿಗೆ ಅಭಿಷೇಕ ಏರ್ಪಾಡಾಗಿದೆ. ಕದಳಿ ಮಹಿಳಾ ತಂಡದಿಂದ ಹಾಗೂ ರುದ್ರಾಕ್ಷಿ ಬಾಯಿ ವೃಂದದವರಿಂದ ಸಂಗೀತ ಸೌರಭ ನಡೆಯುವುದು. 'ವಿಶ್ವಬಂಧು ಶ್ರೀ ಮರುಳಸಿದ್ಧರ ಜೀವನಾದರ್ಶ' ಕುರಿತು ಶ್ರೀಮತಿ ಸುಮತಿ ಜಯಪ್ಪ ಅವರಿಂದ ಉಪನ್ಯಾಸ ನಡೆಯುವುದು.

# ನರಗನಹಳ್ಳಿಯಲ್ಲಿ ಇಂದು ವೀರಾಂಜನೇಯ ಕಾರ್ತಿಕೋತ್ಸವ

ದಾವಣಗೆರೆ ತಾಲ್ಲೂಕಿನ ನರಗನಹಳ್ಳಿ ಗ್ರಾಮದ ಶ್ರೀ ಚಿರಂಜೀವಿ ವೀರಾಂಜನೇಯ ಸ್ವಾಮಿಯ ಕಾರ್ತಿಕೋತ್ಸವವು ಇಂದು ರಾತ್ರಿ 8.30 ಕ್ಕೆ ನಡೆಯಲಿದೆ. ಇಂದು ಬೆಳಿಗ್ಗೆ 8.30 ಕ್ಕೆ ಸ್ವಾಮಿಗೆ ಪಂಚಾಮೃತ ಅಭಿಷೇಕ ಮತ್ತು ವಿಶೇಷ ಅಲಂಕಾರ ನಂತರ ಮಂಗಳಾರತಿ ನಡೆಯುವುದು. ಸಂಜೆ 6 ಗಂಟೆಗೆ 5008 ದೀಪಗಳನ್ನು ಹಚ್ಚಲಾಗುವುದು.

## ಕ್ಯಾಪ್ಟನ್ ಸಿಂಗ್ ನಿಧನ : ಕಾಂಗ್ರೆಸ್ ಸಂತಾಪ

ದಾವಣಗೆರೆ, ಡಿ.15 - ತಮಿಳುನಾಡಿನಲ್ಲಿ ಸಂಭವಿಸಿದ ಹೆಲಿಕಾಪ್ಟರ್ ದುರಂತದಲ್ಲಿ ಗಂಭೀರವಾಗಿ ಗಾಯಗೊಂಡಿದ್ದ ಗ್ರೂಪ್ ಕ್ಯಾಪ್ಟನ್ ವರುಣ್ ಸಿಂಗ್ ನಿಧನಕ್ಕೆ ಶಾಸಕ ಡಾ|| ಶಾಮನೂರು ಶಿವಶಂಕರಪ್ಪ, ಮಾಜಿ ಸಚಿವ ಎಸ್.ಎಸ್.ಮಲ್ಲಿಕಾರ್ಜುನ್, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಹೆಚ್.ಬಿ.ಮಂಜಪ್ಪ, ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ.ಶೆಟ್ಟಿ ಅವರು ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ.

# ಬಿಸಿಸಿಐ ವಿರುದ್ಧ ಕೊಹ್ಲಿ ನಡೆ

**(1ನೇ ಪುಟದಿಂದ)** ತಿರುಗಿ ಬಿದ್ದಿರುವ ಅಪರೂಪದ ಪ್ರಕರಣ ಇದಾಗಿದೆ. ಕೊಹ್ಲಿ ಹೇಳಿಕೆಯ ಬಗ್ಗೆ ಬಿಸಿಸಿಐ ಇದುವರೆಗೂ ಯಾವುದೇ ಅಧಿಕೃತ ಹೇಳಿಕೆ ನೀಡಿಲ್ಲ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿರುವ ಕೊಹ್ಲಿ, ಬಿಸಿಸಿಐ ಬಳಿ ಟಿ20 ನಾಯಕತ್ವ ಬಿಡುವುದಾಗಿ ಹೇಳಿದ್ದೆ. ನಾಯಕ ಸ್ಥಾನ ಬಿಡುತ್ತಿರುವ ಕಾರಣದ ಕುರಿತು ತಿಳಿಸಿದ್ದೆ. ಆಗ ಮಂಡಳಿ ನಾಯಕತ್ವ ಬಿಡದಂತೆ ತಿಳಿಸಿರಲಿಲ್ಲ ಎಂದಿದ್ದಾರೆ. ದಕ್ಷಿಣ ಆಫ್ರಿಕಾಗೆ ಟೆಸ್ಟ್ ತಂಡ ಆಯ್ಕೆ ಮಾಡುವ ಸಭೆ ನಡೆಯುವ ಒಂದೂವರೆ ಗಂಟೆ ಮುಂಚೆ ಏಕದಿನ ತಂಡದ ನಾಯಕತ್ವದಿಂದ ತೆಗೆದು ಹಾಕುವ ಬಗ್ಗೆ ತಿಳಿಸಲಾಗಿತ್ತು. ಅದಕ್ಕೂ ಮುಂಚೆ ನಾಯಕತ್ವದಿಂದ ತೆಗೆದು ಹಾಕುವ ಬಗ್ಗೆ ತಿಳಿಸಿರಲಿಲ್ಲ ಎಂದು ಕೊಹ್ಲಿ ಹೇಳಿದ್ದಾರೆ.


## ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ ನನ್ನ ಕಕ್ಷಿದಾರರಾದ ಶ್ರೀ ಎಂ.ವಿ. ಮಲ್ಲಿಕಾರ್ಜುನ ಬಿನ್ ಮಧುರೆ ವೀರಪ್ಪ ಡೋರ್ ನಂಬರ್ 1725/58ಎ, ಸಿದ್ದಲಿಂಗೇಶ್ವರ ಬಡಾವಣೆ, ಕೆ.ಇ.ಬಿ.ಸಮುದಾಯ ಭವನದ ಹತ್ತಿರ. ದಾವಣಗೆರೆ ಇವರು ಈ ಕೆಳಗೆ ಷೆಡ್ಯೂಲ್‌ನಲ್ಲಿ ವಿವರಿಸಿರುವ ಪೂರಾ ಸೊತ್ತನ್ನು ಕ್ರಯಕ್ಕೆ ಪಡೆಯಲು ಇಚ್ಚಿಸಿರುತ್ತಾರೆ. ಷೆಡ್ಯೂಲ್‌ನಲ್ಲಿ ವಿವರಿಸಿರುವ ಪೂರಾ ಸೊತ್ತಿನ ಮಾಲೀಕರಾದ ಶ್ರೀಮತಿ ಕೊಟ್ರಮ್ಮ ಯಾನೇ ಕಾವ್ಯ ತಂದೆ ಪರಮೇಶ್ವರಪ್ಪ ಅವರಗೆರೆ ಮತ್ತು ಕೆ.ಕಿರಣ್ ಕುಮಾರ್ ತಂದೆ ಎಸ್.ಕರಿಬಸವರಾಜು, ಡೋರ್ ನಂಬರ್ 695/8, ಸೈಯದ್ ಪೀರ್ ಬಡಾವಣೆ, ದಾವಣಗೆರೆ ಇವರು ಈ ಹಿಂದೆ ತಾರೀಖು 2.4.2021 ರಂದು ದಾವಣಗೆರೆ ಹಿರಿಯ ಉಪ ನೋಂದಣಾಧಿಕಾರಿಗಳವರ ಕಛೇರಿಯಲ್ಲಿ 1ನೇ ಪುಸ್ತಕದ ಸಿ.ಡಿ.ನಂಬರ್ ಡಿವಿಜಿಡಿ 244ರಲ್ಲಿ ಡಿವಿಜಿ-1.00116/2011.12ನೇ ನಂಬರಾಗಿ ರಿಜಿಸ್ಟರ್ ಆಗಿರುವ ಕ್ರಯ ಪತ್ರದ ಮೂಲಕ ಶ್ರೀ ಎಂ. ಜಯಂತಿಲಾಲ್ ಬಿನ್ ಜಿ. ಮಗನಲಾಲ್ ಕಾಯಿಪೇಟೆ, ದಾವಣಗೆರೆ ಇವರಿಂದ ಕ್ರಯಕ್ಕೆ ಪಡೆದ ಷೆಡ್ಯೂಲ್‌ನಲ್ಲಿ ವಿವರಿಸಿರುವ ಪೂರಾ ಸೊತ್ತಾಗಿರುತ್ತದೆ.

ಷೆಡ್ಯೂಲ್‌ನಲ್ಲಿ ವಿವರಿಸಿರುವ ಪೂರಾ ಸೊತ್ತನ್ನು ನನ್ನ ಕಕ್ಷಿದಾರರಾದ ಶ್ರೀ ಎಂ.ವಿ. ಮಲ್ಲಿಕಾರ್ಜುನ ಬಿನ್ ಮಧುರೆ ವೀರಪ್ಪ ಇವರು ಕ್ರಯಕ್ಕೆ ಪಡೆಯಲು ಸಿದ್ಧರಿರುತ್ತಾರೆ. ಷೆಡ್ಯೂಲ್‌ನಲ್ಲಿ ವಿವರಿಸಿರುವ ಪೂರಾ ಆಸ್ತಿಯ ಬಗ್ಗೆ ಯಾರದಾದರೂ, ಯಾವುದೇ ರೀತಿಯ ತಂಟೆ, ತಕರಾರು, ವ್ಯಾಜ್ಯ, ಆಕ್ಷೇಪಣೆ ವಗೈರೆ ಏನೇ ಇದ್ದರೂ, ಈ ಪ್ರಕಟಣೆ ಪ್ರಕಟವಾದ 7 (ಏಳು) ದಿವಸದೊಳಗಾಗಿ ಲಿಖಿತ ಹಾಗೂ ಸಂಬಂಧಪಟ್ಟ ದಾಖಲೆಗಳೊಂದಿಗೆ ಈ ಕೆಳಗೆ ಕಾಣಿಸಿರುವ ವಿಳಾಸಕ್ಕೆ ಸಲ್ಲಿಸತಕ್ಕದ್ದು. ತಪ್ಪಿದಲ್ಲಿ ಈ ಬಗ್ಗೆ ಯಾರದೂ ಯಾವುದೇ ರೀತಿಯ ಹಕ್ಕು, ಬಾಧ್ಯತೆ, ತಂಟೆ, ತಕರಾರು, ವ್ಯಾಜ್ಯ, ಆಕ್ಷೇಪಣೆ ಇಲ್ಲವೆಂದು ತಿಳಿದು ನನ್ನ ಕಕ್ಷಿಗಾರರು ಸದರಿ ಷೆಡ್ಯೂಲ್‌ನಲ್ಲಿ ವಿವರಿಸಿರುವ ಪೂರಾ ಸೊತ್ತನ್ನು ಮೇಲ್ಕಂಡವರಿಂದ ಕ್ರಯ ಪತ್ರ ನೋಂದಣಿ ಮಾಡಿಕೊಳ್ಳಲು ಸಿದ್ಧರಾಗಿರುತ್ತಾರೆ. ಷೆಡ್ಯೂಲ್‌ನಲ್ಲಿ ವಿವರಿಸಿರುವ ಪೂರಾ ಸೊತ್ತನ್ನು ನೋಂದಣಿಯಾದ ನಂತರ ಈ ಬಗ್ಗೆ ಯಾರಿಂದಲಾದರೂ ಯಾವುದೇ ರೀತಿಯ ತಂಟೆ, ತಕರಾರು, ವ್ಯಾಜ್ಯ, ಆಕ್ಷೇಪಣೆಗಳು ಬಂದಲ್ಲಿ ಅವುಗಳನ್ನು ಪರಿಗಣಿಸಲಾಗುವುದಿಲ್ಲವೆಂದು ಮತ್ತು ಸದರಿ ಯಾವುದೇ ರೀತಿಯ ಆಕ್ಷೇಪಣೆ, ವಗೈರೆಗಳು ನನ್ನ ಕಕ್ಷಿಗಾರರನ್ನು ಪ್ರತಿಬಂಧಿಸುವುದಿಲ್ಲವೆಂದು ಈ ಮೂಲಕ ಸಾರ್ವಜನಿಕರಿಗೆ ತಿಳಿಸಲಾಗಿದೆ.

**ಷೆಡ್ಯೂಲ್**

**(ತಾರೀಖು 02.04.2011ರ ರಿಜಿಸ್ಟರ್ ನಂ. ಡಿವಿಜಿ 1-00116/2011-12ರ ರಿಜಿಸ್ಟರ್ಡ್ ಕ್ರಯ ಪತ್ರದಲ್ಲಿ ಕಂಡಂತೆ)**

ದಾವಣಗೆರೆ ತಾಲ್ಲೂಕು, ಕಸಬಾ ಹೋಬಳಿ, ನಿಟುವಳ್ಳಿ ಗ್ರಾಮದ ರೀ ಸರ್ವೆ ನಂಬರ್ 4/1ಎ, ಪೂರಾ ವಿಸ್ತೀರ್ಣ ಎಕರೆ 5 ಗುಂಟೆ 16 ಉಳ್ಳದರ ಪೈಕಿ ವಿಸ್ತೀರ್ಣ ಎಕರೆ 3 ಗುಂಟೆ 27 ಉಳ್ಳ ಜಮೀನನ್ನು ವಸತಿ ಉದ್ದೇಶಕ್ಕಾಗಿ ದಾವಣಗೆರೆ ಜಿಲ್ಲಾಧಿಕಾರಿಗಳವರಿಂದ ಈ ಹಿಂದೆ ತಾರೀಖು 25.4.2007 ರಂದು ಆದೇಶ ನಂಬರ್ ಎ.ಎಲ್. ಎನ್. ಎಸ್. ಆರ್ 90/2006-7ರ ಪ್ರಕಾರ ಪರಿವರ್ತನೆಯಾಗಿರುವ ಪ್ರದೇಶದಲ್ಲಿ ವಿಂಗಡಿಸಿರುವ ನಿವೇಶನಗಳ ಬಗ್ಗೆ ತಯಾರಿಸಿದ ವಸತಿ ವಿನ್ಯಾಸದ ಅಂತಿಮ ಮಂಜೂರಾತಿಯನ್ನು ಈ ಹಿಂದೆ ದಾವಣಗೆರೆ ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದಿಂದ ನಂಬರ್ ದಾಹನಪ್ರಾ/ಯೋವಿ/ ಅಂಹವಿ/281/2007-08ರ ಪ್ರಕಾರ ತಾರೀಖು 7.1.2009ರಂದು ಪಡೆದಿರುತ್ತೆ. ನಂತರ ತಾರೀಖು 23.2.2011 ರಂದು ಮಹಾನಗರ ಪಾಲಿಕೆ ಕಾರ್ಯಾಲಯ, ದಾವಣಗೆರೆ ಇವರ ಕಛೇರಿಯ ಆದೇಶ ನಂಬರ್ ದಾಮಪಾ/ಕಂಪಾ/ ಎಲ್.ಎನ್.ಡಿ./ ಸಿ.ಆರ್. 09/2010-11 ರ ಪ್ರಕಾರ ಡೋರ್ ನಂಬರ್ ದಾಖಲೆಯಾದ ನಿಟುವಳ್ಳಿ ವಿಭಾಗದಲ್ಲಿರುವ ಸೈಟುಗಳ ಪೈಕಿ ಸೈಟ್ ನಂಬರ್ 19 (ಹತ್ತೊಂಭತ್ತು) ಇದರ ಡೋರ್ ನಂಬರ್ 680/19 ಇದರ ಅಳತೆ 9.00x12.00 ಮೀಟರ್ (30x40 ಅಡಿ) ಉಳ್ಳ ಖಾಲಿ ಜಾಗಕ್ಕೆ ಚಕ್ಕು ಬಂದಿ: ಪೂರ್ವಕ್ಕೆ : ಸೈಟ್ ನಂಬರ್ 18, ಪಶ್ಚಿಮಕ್ಕೆ : ಸೈಟ್ ನಂಬರ್ 20. ಉತ್ತರಕ್ಕೆ : 9 ಮೀಟರ್ ಅಗಲದ ರಸ್ತೆ, ದಕ್ಷಿಣಕ್ಕೆ : ಸೈಟ್ ನಂಬರ್ 11. ಈ ಮಧ್ಯದ ಪೂರಾ ಸೊತ್ತು ಒಂದು ಈ ಸಾರ್ವಜನಿಕ ಪ್ರಕಟಣೆಗೆ ಒಳಪಟ್ಟಿರುತ್ತದೆ.

ಸ್ಥಳ : ದಾವಣಗೆರೆ ದಿನಾಂಕ : 11.12.2021

ಕೊಟ್ರಮ್ಮ ಯಾನೆ ಕಾವ್ಯ, ಕೆ. ಕಿರಣ್ ಕುಮಾರ್
ಸೊತ್ತಿನ ಮಾಲೀಕರ ರುಜು

ಡಿ.ಎಸ್.ಶ್ಯಾಮಸುಂದರ್, ಬಿ.ಕಾಂ., ಎಲ್.ಎಲ್.ಬಿ., ವಕೀಲರು
# 47/4 ವಸಂತ ರಸ್ತೆ, ದಾವಣಗೆರೆ-577001 ಮೊ: 94805 98965
ಎಂ.ವಿ. ಮಲ್ಲಿಕಾರ್ಜುನ್
ಕ್ರಯಕ್ಕೆ ಪಡೆಯುವವರ ರುಜು. (ಮೊ: 98446 79248)



## ಮಳಿಗೆಗಳು ಬಾಡಿಗೆಗೆ ದೊರೆಯುತ್ತವೆ

ದಾವಣಗೆರೆ ಸಿಟಿ ಹರ್ಡೇಕರ್ ಮಂಜಪ್ಪ ರಸ್ತೆಯಲ್ಲಿರುವ ಹಳೇ ಎಸ್.ಎಸ್.ವಿ. ಹಾಸ್ಟೆಲ್ ಕಟ್ಟಡದ ನೆಲ ಮಹಡಿಯಲ್ಲಿ 12.5x20 ಅಡಿ ಅಳತೆಯುಳ್ಳ 2 ಮಳಿಗೆಗಳು ಮತ್ತು ಮೊದಲ ಮಹಡಿಯಲ್ಲಿ 14 ಮಳಿಗೆಗಳು ಬಾಡಿಗೆಗೆ ದೊರೆಯುತ್ತವೆ. ಮಳಿಗೆಗಳಲ್ಲಿ ವಿದ್ಯುತ್ ಪೂರೈಕೆ ಇರುತ್ತದೆ. ಆಸಕ್ತರು ಹಾಸ್ಟೆಲ್ ಕಟ್ಟಡದಲ್ಲಿರುವ ಕಛೇರಿಯಲ್ಲಿ ವಿಚಾರಿಸಬಹುದು.

**ಎಸ್.ಎಸ್.ವಿ. ಹಾಸ್ಟೆಲ್ ಕಟ್ಟಡ**
ನಿರ್ವಹಣಾ ಸಮಿತಿ, ನರಸರಾಜ ರಸ್ತೆ, ದಾವಣಗೆರೆ.

ಸಂಪರ್ಕಿಸಬೇಕಾದ ಮೊಬೈಲ್ ಸಂಖ್ಯೆ :
**94483 64901, 90086 37379**



## ಭಕ್ತಿಪೂರ್ವಕ ಶ್ರದ್ಧಾಂಜಲಿ



ದಿನಾಂಕ 15.12.2021ರಂದು ಅಸೌಖ್ಯದಿಂದ ವಿಶ್ವಕರ್ಮ ಸಾಯುಜ್ಯ ಹೊಂದಿದ
ವೇದ ವೇದಾಂತಾಚಾರ್ಯ ರಾಷ್ಟ್ರಸಂತರಾದ
ವಿಶ್ವಕರ್ಮ ಸಮಾಜದ ಮೇರು ರತ್ನ
ಚಿಕ್ಕಬಳ್ಳಾಪುರ ಜಿಲ್ಲೆ, ನಂದಿ ಗ್ರಾಮದ ಶ್ರೀ ಜ್ಞಾನಾನಂದ ಆಶ್ರಮದ
**ಶ್ರೀ ಸ್ವಾಮಿ ಶಿವಾತ್ಮಾನಂದ ಸರಸ್ವತಿ ಸ್ವಾಮೀಜಿಯವರಿಗೆ**
ನಮ್ಮ ಭಕ್ತಿ ಪೂರ್ವಕ ಶ್ರದ್ಧಾಂಜಲಿ.

**ಬಿ.ವಿ. ಶಿವಾನಂದ** ಅಧ್ಯಕ್ಷರು — **ಆರ್. ವಿಜಯಕುಮಾರ್** ಉಪಾಧ್ಯಕ್ಷರು

ನಿರ್ದೇಶಕರುಗಳು :

✦ ಬಿ.ನಾಗೇಂದ್ರಾಚಾರ್ (ಬಸಾಪುರ) ✦ ಎ.ಬಿ. ರವಿ ✦ ಹೆಚ್.ಎನ್.ಜಯಾಚಾರ್ (ಹಿರೇಮೇಗಳಗೆರೆ) ✦ ಬಿ. ಸಿದ್ದಾಚಾರ್
✦ ಎಂ.ಪಿ.ನಾಗರಾಜ್ (ಶಾಮನೂರು) ✦ ಎಸ್.ನಾಗರಾಜಾಚಾರ್ (ಮಾಯಕೊಂಡ) ✦ ಎನ್.ಪೂರ್ವಾಚಾರ್
✦ ವಿ.ಎಂ.ಕೊಟ್ರೇಶಾಚಾರ್ ✦ ಆರ್.ರೇಖಾ ರಮೇಶ್ ✦ ನೀಲಾವತಿ ಮಂಜುನಾಥಾಚಾರ್ ✦ ಭಾಗ್ಯಮ್ಮ ಮಂಜುನಾಥ
✦ ಸಿ.ಆರ್.ಬಡಿಗೇರ್, ಕಾರ್ಯದರ್ಶಿ ✦ ಸಿಬ್ಬಂದಿ ವರ್ಗದವರು

**ವಿಶ್ವಕರ್ಮ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿ.,**
ಮುಖ್ಯ ಕಛೇರಿ : ನಂ.75/1, ತುಳಸಿ ಕಾಂಪ್ಲೆಕ್ಸ್, 1ನೇ ಮಹಡಿ, ವಸಂತ ರಸ್ತೆ, ದಾವಣಗೆರೆ-01.
ಶಾಖಾ ಕಛೇರಿ : ಹೆಚ್.ಕೆ.ಆರ್. ಸರ್ಕಲ್, ನಿಟುವಳ್ಳಿ ದಾವಣಗೆರೆ.

## ರಾಣೇಬೆನ್ನೂರಿಗೆ ಇಂದು ತರಳಬಾಳು, ದೇವಾಂಗ ಶ್ರೀಗಳು



ರಾಣೇಬೆನ್ನೂರಿನ ಕುರುಬಗೇರಿಯಲ್ಲಿ ನೂತನವಾಗಿ ನಿರ್ಮಿಸಿರುವ ಶ್ರೀ ಬನಶಂಕರಿ ದೇವಸ್ಥಾನದ ಕಳಸಾರೋಹಣ ಸಮಾರಂಭದಲ್ಲಿ ತರಳಬಾಳು ಜಗದ್ಗುರು ಡಾ. ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮೀಜಿ ಹಾಗೂ ದೇವಾಂಗ ಜಗದ್ಗುರು ಶ್ರೀ ದಯಾನಂದಪುರಿ ಮಹಾಸ್ವಾಮೀಜಿ ಪಾಲ್ಗೊಳ್ಳುವರು.

ಮಹೇಶಪ್ಪ ಕೊಪ್ಪದ ಅಧ್ಯಕ್ಷತೆ ವಹಿಸಲಿದ್ದು, ಶಾಸಕ ಅರುಣಕುಮಾರ ಪೂಜಾರ, ಮಾಜಿ ಶಾಸಕ ಎಂ.ಡಿ. ಲಕ್ಷ್ಮೀನಾರಾಯಣ ಹಾಗೂ ಇನ್ನಿತರೆ ಜನಪ್ರತಿನಿಧಿಗಳು ಆಗಮಿಸುವರು.

## 20 ರಂದು ಶ್ರೀ ಗುರು ಕೊಟ್ಟೂರೇಶ್ವರ ಸ್ವಾಮಿಯ ಕಡೇ ಕಾರ್ತಿಕೋತ್ಸವ



ದಾವಣಗೆರೆ, ಡಿ.15- ನಗರದ ಮಾಗಾನಹಳ್ಳಿ ರಸ್ತೆಯ ಶ್ರೀ ಗುರು ಕೊಟ್ಟೂರೇಶ್ವರ ಮಹಾಸ್ವಾಮಿ ದೇವಸ್ಥಾನದಲ್ಲಿ ಇದೇ ದಿನಾಂಕ 20 ರ ಸೋಮವಾರ ಸಂಜೆ 6 ಗಂಟೆಗೆ ಕಡೇ ಕಾರ್ತಿಕೋತ್ಸವವನ್ನು ಹಮ್ಮಿಕೊಳ್ಳಲಾಗಿದೆ.

ಅಂದು ಬೆಳಿಗ್ಗೆ 6ಕ್ಕೆ ರುದ್ರಾಭಿಷೇಕ, ಮಹಾಪ್ರಸಾದ ಏರ್ಪಡಿಸಲಾಗಿದೆ. ಸಂಜೆ 6 ಕ್ಕೆ ಕಾರ್ತಿಕ ದೀಪೋತ್ಸವ ನಡೆಯಲಿದೆ. ವಿವರಗಳಿಗೆ ಕಣಕುಪ್ಪಿ ಮುರುಗೇಶಪ್ಪ (96118 89151), ಟಿ.ಜೆ. ಬಕ್ಕೇಶಪ್ಪ (94483 56968), ಬಿ. ಚಿದಾನಂದಪ್ಪ (98445 28449, ಮಲ್ಲಾಬಾದಿ ಗುರುಬಸವರಾಜು (79757 97079) ಅವರುಗಳನ್ನು ಸಂಪರ್ಕಿಸಬಹುದು.

# ಕೋಳಿ ಸಾಕಾಣಿಕೆದಾರರಿಗೆ ಅನ್ಯಾಯ



### ಚಿಕನ್ ಕಂಪನಿ ವಿರುದ್ಧ ಕೋಳಿ ಸಾಕಾಣಿಕೆದಾರರ ಪ್ರತಿಭಟನೆ

ದಾವಣಗೆರೆ, ಡಿ.15- ಕೋಳಿ ಸಾಕಾಣಿಕೆದಾರರನ್ನು ಶೋಷಣೆ ಮಾಡುವ ಜೊತೆಗೆ ಕೋಳಿ ಮಾಂಸ ಖರೀದಿಸುವ ಗ್ರಾಹಕರಿಗೆ ಅನ್ಯಾಯ ಮಾಡುತ್ತಿರುವುದಾಗಿ ಆರೋಪಿಸಿ ನಗರದ ಶಾಬನೂರು ರಸ್ತೆಯ ವೆಂಕಾಬ್ ಚಿಕನ್ಸ್ ಕಚೇರಿಗೆ ಅಖಿಲ ಕರ್ನಾಟಕ ಕೋಳಿ ಸಾಕಾಣಿಕೆದಾರರ ಕ್ಷೇಮಾಭಿವೃದ್ಧಿ ಸಂಘದ ನೇತೃತ್ವದಲ್ಲಿ ಇಂದು ಕೋಳಿ ಸಾಕಾಣಿಕೆದಾರರು ಮುತ್ತಿಗೆ ಹಾಕಿ ಪ್ರತಿಭಟಿಸಿದರು.

ಇದೇ ವೇಳೆ ಮಾತನಾಡಿದ ಸಂಘದ ರಾಜ್ಯ ಕಾರ್ಯಾಧ್ಯಕ್ಷ ಮಲ್ಲಾಪುರ ದೇವರಾಜ, ವೆಂಕಾಬ್ಸ್ ಚಿಕನ್‌ನವರು ಹೆಚ್ಚಿನ ದರಕ್ಕೆ ಕೋಳಿ ಮರಿ ಮಾರಾಟ ಮಾಡಿ, ಮಾರುಕಟ್ಟೆಯಲ್ಲಿ ಕೇವಲ 70 ರೂ.ಗೆ ಕೋಳಿ ಖರೀದಿಗೆ ದರ ನಿಗದಿಪಡಿಸಿರುವ ಕಂಪನಿಗಳು ಅದೇ ಕೋಳಿ ಮಾಂಸವನ್ನು ಗ್ರಾಹಕರಿಗೆ 140 ರೂ.ಗಳಿಗೆ ಮಾರಾಟ ಮಾಡುತ್ತಾ ಒಂದು ಕಡೆ ಕೋಳಿ ಬೆಳೆದ ರೈತರಿಗೆ ಖರೀದಿಯಲ್ಲಿ ಶೋಷಣೆ ಮಾಡಿದರೆ, ಕೋಳಿ ಮಾಂಸ ಖರೀದಿಸುವ ಗ್ರಾಹಕರಿಗೆ ದುಪ್ಪಟ್ಟು ಬೆಲೆಗೆ ಮಾರಾಟ ಮಾಡಿ, ಅನ್ಯಾಯ ಮಾಡುತ್ತಿವೆ ಎಂದು ಆಪಾದಿಸಿದರು.

ರೈತರು ಕೋಳಿ ಸಾಕಲು ಪ್ರತಿ ಕೋಳಿಗೆ 95 ರೂ.ಗಳಷ್ಟು ವೆಚ್ಚ ಮಾಡುತ್ತಾರೆ. ಕಂಪನಿಗಳು ಪ್ರತಿ ಕೋಳಿಗೆ 25 ರೂ. ನಷ್ಟ ಮಾಡುತ್ತಿವೆ. ಗ್ರಾಹಕರಿಗೆ ಅದೇ ಕೋಳಿಗೆ 75 ರೂ. ದರ ಹೆಚ್ಚಿಸಿ ಮಾರುತ್ತಿವೆ. ಇಲ್ಲಿ ಕೋಳಿ ಸಾಕಿದ ರೈತರಿಗೂ ಲಾಭವಿಲ್ಲ, ಕೋಳಿ ಮಾಂಸ ಖರೀದಿಸುವ ಗ್ರಾಹಕರಿಗೆ ಅನ್ಯಾಯ ತಪ್ಪಲಿಲ್ಲ ಎಂದು ಆಕ್ಷೇಪಿಸಿದರು.

ಇಂತಹ ಕೋಳಿ ಮಾಂಸದ ಕಂಪನಿಗಳಿಗೆ ತೆರಿಗೆ ಹೇರುವಂತೆ, ಜಿಎಸ್‌ಟಿ ವ್ಯಾಪ್ತಿಗೆ ತರುವಂತೆ ಪಶು ಸಂಗೋಪನಾ ಇಲಾಖೆ, ರಾಜ್ಯ, ಕೇಂದ್ರ ಸರ್ಕಾರಗಳಿಗೆ ನಿರಂತರ ಒತ್ತಾಯಿಸುತ್ತಿದ್ದರೂ ಯಾರೊಬ್ಬರೂ ಕಿವಿಗೊಡುತ್ತಿಲ್ಲ ಎಂದು ದೂರಿದರು.

ರೈತರಿಗೆ ನೇರವಾಗಿ ಕೋಳಿ, ಕೋಳಿ ಮಾಂಸ ಮಾರಾಟ ಮಾಡಲು ಮುಕ್ತ ಅವಕಾಶ ಮಾಡಿಕೊಡಬೇಕು. ರೈತರ ಹೆಸರಿನಲ್ಲಿ ಸಾವಿರಾರು ಕೋಟಿ ರೂ. ಹೂಡಿ, ಅದರ ದುಪ್ಪಟ್ಟು ಲಾಭ ಬಾಚಿಕೊಳ್ಳುತ್ತಿರುವ ಕಂಪನಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ವಿಷಯ ತಿಳಿದು ಸ್ಥಳಕ್ಕೆ ಧಾವಿಸಿದ ನಗರ ಸಿಪಿಐ ಸುರೇಶ್ ಸಗರಿ ಪ್ರತಿಭಟನಾ ನಿರತರ ಜೊತೆಗೆ ಚರ್ಚಿಸಿ, ಇದೇ ದಿನಾಂಕ 18ಕ್ಕೆ ವೆಂಕಾಬ್ ಚಿಕನ್ ಮುಖ್ಯಸ್ಥರೊಂದಿಗೆ ಸಂಘದ ಮುಖಂಡರ ಸಭೆ ನಡೆಸುವುದಾಗಿ ಭರವಸೆ ನೀಡಿದರು. ನಂತರ ರೈತರು ಹೋರಾಟವನ್ನು ತಾತ್ಕಾಲಿಕವಾಗಿ ಹಿಂಪಡೆದರು.

ಪ್ರತಿಭಟನೆಯಲ್ಲಿ ಸಂಘದ ಮೆದಿಕೆರೆ ಮಂಜುನಾಥ, ಗುರುಮೂರ್ತಿ, ಐಗೂರು ಶಿವಮೂರ್ತೆಪ್ಪ, ಚಿಕ್ಕನಹಳ್ಳಿ ಮಂಜುನಾಥ, ಕೊಂಡಜ್ಜಿ ನಾಗರಾಜ, ರಾಣೇಬೆನ್ನೂರು ಸುರೇಶ, ಬನ್ನಿಕೋಡು ಅಭಿಷೇಕ, ಷಂಷೀಪುರ ಮಂಜಣ್ಣ ಸೇರಿದಂತೆ ಇತರರು ಭಾಗವಹಿಸಿದ್ದರು.

## ಅಪಘಾತದಲ್ಲಿ ಗಾಯಗೊಂಡಿದ್ದ ಗ್ರೂಪ್ ಕ್ಯಾಪ್ಟನ್ ಸಿಂಗ್ ನಿಧನ



**ಊಟಿ ಬಳಿಯ ಹೆಲಿಕಾಪ್ಟರ್ ಅಪಘಾತದಲ್ಲಿ ಬದುಕಿದ್ದ ಏಕೈಕ ಸೈನಿಕ ಅಧಿಕಾರಿ**

ನವದೆಹಲಿ, ಡಿ. 15 - ಊಟಿ ಬಳಿ ಅಪಘಾತಕ್ಕೀಡಾದ ಹೆಲಿಕಾಪ್ಟರ್‌ನಲ್ಲಿ ಬದುಕುಳಿದಿದ್ದ ಏಕೈಕ ಯೋಧ ಗ್ರೂಪ್ ಕ್ಯಾಪ್ಟನ್ ವರುಣ್ ಸಿಂಗ್ ಅವರು ಬೆಂಗಳೂರಿನ ಸೈನಿಕ ಆಸ್ಪತ್ರೆಯಲ್ಲಿ ಕೊನೆಯುಸಿರೆಳೆದಿದ್ದಾರೆ.

ಊಟಿ ಬಳಿ ನಡೆದ ಹೆಲಿಕಾಪ್ಟರ್ ಅಪಘಾತದಲ್ಲಿ ಸಿಡಿಎಸ್ ಜನರಲ್ ಬಿಪಿನ್ ರಾವತ್, ಪತ್ನಿ ಹಾಗೂ 11 ಸೈನಿಕ ಪಡೆಗಳ ಸಿಬ್ಬಂದಿ ಸಾವನ್ನಪ್ಪಿದ್ದರು. ಸಾವಿನ ಎದುರು ದಿಟ್ಟ ಹೋರಾಟ ನಡೆಸಿದ್ದ ಗ್ರೂಪ್ ಕ್ಯಾಪ್ಟನ್ ಸಿಂಗ್ ಅವರು, ತೀವ್ರ ಸುಟ್ಟಿನ ಗಾಯಗಳಿಂದಾಗಿ ಕೊನೆಯುಸಿರೆಳೆದಿದ್ದಾರೆ.

ಕಳೆದ ಆಗಸ್ಟ್‌ನಲ್ಲಿ ಗ್ರೂಪ್ ಕ್ಯಾಪ್ಟನ್ ಸಿಂಗ್ ಅವರಿಗೆ ಶೌರ್ಯ ಚಕ್ರ ಪ್ರಶಸ್ತಿ ನೀಡಲಾಗಿತ್ತು. ಇದು ಶಾಂತಿ ಕಾಲದಲ್ಲಿ ಸೈನಿಕರಿಗೆ ನೀಡಲಾಗುವ ಅತಿ ದೊಡ್ಡ ಗೌರವವಾಗಿದೆ.

39 ವರ್ಷದ ಗ್ರೂಪ್ ಕ್ಯಾಪ್ಟನ್ ಸಿಂಗ್ ಅವರು, ಟೆಸ್ಟ್ ಪೈಲಟ್ ಆಗಿ ಹೆಸರು ಮಾಡಿದ್ದರು. ಅವರು 11 ವರ್ಷದ ಮಗ, 8 ವರ್ಷದ ಮಗಳು ಹಾಗೂ ಪತ್ನಿಯನ್ನು ಅಗಲಿದ್ದಾರೆ. ಅವರ ತಂದೆ ಕರ್ನಲ್ (ನಿವೃತ್ತ) ಕೆ.ಪಿ. ಸಿಂಗ್ ಅವರು ಸೈನ್ಯದ ವಾಯು ರಕ್ಷಣಾ ವಿಭಾಗದಲ್ಲಿ ಸೇವೆ ಸಲ್ಲಿಸಿದ್ದರು.

ಉತ್ತರ ಪ್ರದೇಶದ ಘಾಜಿಪುರ ಮೂಲದ ಗ್ರೂಪ್ ಕ್ಯಾಪ್ಟನ್ ಕುಟುಂಬ ಪ್ರಸಕ್ತ ಭೂಪಾಲದಲ್ಲಿ ನೆಲೆಸಿದೆ.

ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಗ್ರೂಪ್ ಕ್ಯಾಪ್ಟನ್ ಸಿಂಗ್ ನಿಧನಕ್ಕೆ ಶ್ರದ್ಧಾಂಜಲಿ ಸಲ್ಲಿಸಿದ್ದು, ಅವರು ದೇಶಕ್ಕೆ ಸಲ್ಲಿಸಿದ ಸೇವೆಯನ್ನು ಎಂದೂ ಮರೆಯಲಾಗದು ಎಂದಿದ್ದಾರೆ.

# ತಹಶೀಲ್ದಾರ್ ವಿರುದ್ಧ ಕ್ರಮಕ್ಕೆ ಕಾಂಗ್ರೆಸ್ ಶಾಸಕರ ಆಗ್ರಹ

### ಅಧಿಕಾರಿ ವರ್ಗಾವಣೆ ಮಾಡಲು ರಾಜ್ಯ ಸರ್ಕಾರದ ನಿರ್ಧಾರ

ಬೆಳಗಾವಿ, ಡಿ. 15 – ತಹಶೀಲ್ದಾರ್‌ರಿಂದ ತಮಗೆ ಹಕ್ಕುಚ್ಯುತಿಯಾಗಿದೆ ಎಂದು ಆರೋಪಿಸಿದ ಕಾಂಗ್ರೆಸ್ ಶಾಸಕ ತುಕಾರಾಂ, ವಿಧಾನಸಭೆಯ ಬಾವಿಗೆ ನುಗ್ಗಿ ಪ್ರತಿಭಟನೆ ನಡೆಸಿದ ಘಟನೆ ನಡೆದಿದೆ.

ಮಹಿಳಾ ತಹಶೀಲ್ದಾರ್ ಭೇಟಿಗೆ ತೆರಳಿದಾಗ ಅವರು ತಮ್ಮನ್ನು ಅವಮಾನಿಸಿದ್ದಾರೆ ಎಂದು ಸಂಡೂರಿನ ಕಾಂಗ್ರೆಸ್ ಶಾಸಕ ತುಕಾರಾಂ ಆರೋಪಿಸಿದ್ದಾರೆ.

ಚಿತ್ರಗಳು, ದಾಖಲೆಗಳು ಹಾಗೂ ವಿಡಿಯೋ ಕ್ಲಿಪ್ ಅನ್ನು ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿಗೆ ಅವರಿಗೆ ತುಕಾರಾಂ ನೀಡಿ ದರು. ಇದಕ್ಕೆ ಉತ್ತರಿಸಿದ ಸಂಸದೀಯ ವ್ಯವಹಾ ರಗಳ ಸಚಿವ ಮಾಧುಸ್ವಾಮಿ, ಘಟನೆಯ ತನಿಖೆಗೆ ಆದೇಶಿಸಿರುವುದಾಗಿ ಹೇಳಿದರು.

ತಹಶೀಲ್ದಾರ್ ವರ್ಗಾವಣೆಗೆ ಆದೇಶಿಸಿರುವುದಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದ್ದರು. ಆದರೂ, ವರ್ಗಾವಣೆಯಾಗಿಲ್ಲ ಎಂದು ಕಾಂಗ್ರೆಸ್ ಪಕ್ಷದ ಹಲವು ಶಾಸಕರು ಹೇಳಿದರು.

ಇದಕ್ಕೆ ಉತ್ತರಿಸಿದ ಬೊಮ್ಮಾಯಿ, ಅಧಿಕಾರಿಯನ್ನು ವರ್ಗಾಯಿಸಲಾಗುವುದು ಹಾಗೂ ಇಲಾಖಾ ತನಿಖೆ ನಡೆಸಲಾಗುವುದು ಎಂದು ಹೇಳಿದರು. ಆದರೆ, ಅಧಿಕಾರಿಯನ್ನು ಹಕ್ಕುಚ್ಯುತಿ ನಿಲುವಳಿಗೆ ಒಳಪಡಿಸಬೇಕು ಎಂದು ಕಾಂಗ್ರೆಸ್ ಶಾಸಕರು ಪಟ್ಟು ಹಿಡಿದರು. ಈ ವಿಷಯವನ್ನು ಹಕ್ಕುಚ್ಯುತಿ ಸಮಿತಿಗೆ ವಹಿಸಲಾಗುವುದು ಎಂದು ವಿಧಾನಸಭಾಧ್ಯಕ್ಷ ಕಾಗೇರಿ ಹೇಳಿದರು.

ಈ ಸಂದರ್ಭದಲ್ಲಿ ಮಾತನಾಡಿದ ಮಾಧುಸ್ವಾಮಿ, ಹಕ್ಕುಚ್ಯುತಿ ಸಮಿತಿ ವರದಿ ಸಲ್ಲಿಸುವವರೆಗೆ ನಾವು ಕಾಯುತ್ತೇವೆ. ಅಲ್ಲಿಯವರೆಗೆ ಯಾವುದೇ ಕ್ರಮ ತೆಗೆದುಕೊಳ್ಳುವುದಿಲ್ಲ ಎಂದರು.

ಇದರಿಂದ ಅಸಮಾಧಾನಗೊಂಡ ಕಾಂಗ್ರೆಸ್ ಶಾಸಕರು, ಸದನದ ಬಾವಿಗೆ ನುಗ್ಗಿ ಪ್ರತಿಭಟಿಸಿದರು. ನಂತರ ಕಲಾಪವನ್ನು ಸ್ವಲ್ಪ ಕಾಲ ಮುಂದೂಡಲಾಯಿತು.

ಮತ್ತೆ ಕಲಾಪ ಪುನರಾರಂಭವಾದಾಗ ಮಾತನಾಡಿದ ಕಂದಾಯ ಸಚಿವ ಆರ್. ಅಶೋಕ್, ಅಧಿಕಾರಿಯನ್ನು ವರ್ಗಾಯಿಸಲಾಗು ವುದು ಹಾಗೂ ಇಲಾಖಾ ತನಿಖೆ ನಡೆಸಲಾ ಗುವುದು ಎಂದು ಹೇಳಿದರು. ನಂತರ ಕಾಂಗ್ರೆಸ್ ಸದಸ್ಯರು ತಮ್ಮ ಸ್ಥಾನಗಳಿಗೆ ಮರಳಿದರು.

## ಪ್ಯಾರಾ ಬ್ಯಾಡ್ಮಿಂಟನ್ ಕ್ರೀಡೆಗೆ ಯಶವಂತ್‌ರಾವ್ ಪ್ರೋತ್ಸಾಹ



ದಾವಣಗೆರೆ, ಡಿ.15- ನಗರದ ಎಸ್.ಓ.ಜಿ ಕಾಲೋನಿ ರಾಮನಗರದ ಪ್ರಸನ್ನ ಅವರು ಒರಿಸ್ಸಾದ ಭುವನೇಶ್ವರದಲ್ಲಿ ಅಂತರರಾಷ್ಟ್ರೀಯ ಪ್ಯಾರಾ ಬ್ಯಾಡ್ಮಿಂಟನ್ ಕ್ರೀಡೆಗೆ ಆಯ್ಕೆಯಾಗಿದ್ದಾರೆ. ಪ್ರಸನ್ನ ಅವರಿಗೆ ಜಿಲ್ಲಾ ಬಿಜೆಪಿ ಮಾಜಿ ಅಧ್ಯಕ್ಷ ಯಶವಂತರಾವ್ ಜಾಧವ್ ಅವರು ಬ್ಯಾಟ್ ಕೊಡಿಸುವ ಮೂಲಕ ಕ್ರೀಡೆಗೆ ಪ್ರೋತ್ಸಾಹಿಸಿದ್ದಾರೆ. ಪ್ರಸನ್ನ ಅವರು ಕ್ರೀಡೆಯಲ್ಲಿ ಜಯಶಾಲಿಯಾಗಿ ಬರಲೆಂದು ಶುಭ ಕೋರಿದ್ದಾರೆ.

ಈ ಸಂದರ್ಭದಲ್ಲಿ ಮನೋಹರ ರಾವ್ ಪೈಲ್ವಾನ್, ಜಿಲ್ಲಾ ಬಿಜೆಪಿ ಕಾರ್ಯದರ್ಶಿ ಎಂ.ಗೋಪಾಲರಾವ್, ಬಿಜೆಪಿ ಯುವ ಮುಖಂಡರಾದ ಪ್ರವೀಣ್ ಕುಮಾರ್ ಜಾದವ್, ಚೇತನ್ ರಾವ್, ಗಣೇಶ್ ರಾವ್ ಹಾಗೂ ಮತ್ತಿತರರು ಪ್ರಸನ್ನ ಅವರನ್ನು ಅಭಿನಂದಿಸಿದ್ದಾರೆ.

## ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಕೊಂಡಜ್ಜಿ ರಸ್ತೆ, ಎಸ್‌ಜೆಎಮ್ ನಗರ, ಸೇವಾದಳ ಕಾಲೋನಿ, ಹೊಸ ಕ್ಯಾಂಪ್, ಎಸ್‌ಎಮ್‌ಕೆ ನಗರ 2ನೇ ಹಂತ, ವೀರಾಂಜನೇಯ ಪೆಟ್ರೋಲ್ ಬಂಕ್ ಹತ್ತಿರ, ಬಿ.ಜೆ.ಎಮ್ ಸ್ಕೂಲ್, ಆರ್‌ಟಿಓ ಆಫೀಸ್, ಬೂದಿಹಾಳ್ ರಸ್ತೆ, ಬಾಬು ಜಗಜೀವನ್‌ರಾಮ್ ನಗರ, ಗೌರಸಂದ್ರ ಮಾರಮ್ಮ ದೇವಸ್ಥಾನದ ಸುತ್ತಮುತ್ತ ಹಾಗೂ ಇತರೆ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 4 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ. ಎಂ.ಸಿ.ಸಿ. ಬಿ ಫೀಡರ್ ವ್ಯಾಪ್ತಿಯ ಕುವೆಂಪು ನಗರ, ಬಿಐಇಟಿ ಕಾಲೇಜ್ ರೋಡ್, ಎಸ್.ಎಸ್. ಲೇಔಟ್ 'ಎ' ಬ್ಲಾಕ್, ಸಿದ್ದವೀರಪ್ಪ ಬಡಾವಣೆ, ಗ್ಲಾಸ್‌ಹೌಸ್ ರೋಡ್, ಅಂಗವಿಕಲ ಶಾಲೆ ಹಾಗೂ ಸುತ್ತಮುತ್ತ, ಎಸ್.ಎಸ್. ಬಡಾವಣೆ, 'ಎ' ಮತ್ತು 'ಬಿ' ಬ್ಲಾಕ್, ಕುಂದುವಾಡ ರಸ್ತೆ, ಅಥಣಿ ಕಾಲೇಜ್ ರಸ್ತೆ, ಬಾಪೂಜಿ ಎಂ.ಬಿ.ಎ. ಕಾಲೇಜ್, ಬಸವನಗುಡಿ ಪಾರ್ಕ್, ಬಸವೇಶ್ವರ ಲೇಔಟ್, ಮಹಾಲಕ್ಷ್ಮಿ ಲೇಔಟ್ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 5 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

## ನಗರದಲ್ಲಿ ನಾಳೆ ಉತ್ಸವಾಂಭ ದೇವಸ್ಥಾನದಲ್ಲಿ ಕಾರ್ತಿಕೋತ್ಸವ



ದಾವಣಗೆರೆ, ಡಿ.15- ನಗರದ ವಸಂತ ರಸ್ತೆ ಹಾಲೇಶ್ವರ ಪ್ರಿಂಟಿಂಗ್ ಪ್ರೆಸ್ ಹಿಂಭಾಗದಲ್ಲಿರುವ ಶ್ರೀ ಉತ್ಸವಾಂಭ ದೇವಸ್ಥಾನದಲ್ಲಿ ಶ್ರೀ ಉತ್ಸವಾಂಭ ದೇವಿ, ಶ್ರೀ ಚೌಡೇಶ್ವರಿ ದೇವಿ, ಶ್ರೀ ಗಣೇಶ, ಶ್ರೀ ಆದಿಶಕ್ತಿ ದೇವಿ, ಶ್ರೀ ಮಹಾಲಕ್ಷ್ಮಿ ದೇವಿ ಈ ದೇವರುಗಳ ಕಾರ್ತಿಕ ದೀಪೋತ್ಸವವನ್ನು ನಾಡಿದ್ದು ದಿನಾಂಕ 17 ರ ಶುಕ್ರವಾರ ಹಮ್ಮಿಕೊಳ್ಳಲಾಗಿದೆ. ಅಂದು ಬೆಳಗಿನ ಜಾವ 4.30 ಕ್ಕೆ ಮಹಾರುದ್ರಾಭಿಷೇಕ ನೆರವೇರಿಸಲಾಗುವುದು. ಅಂದು ಸಂಜೆ 7.30 ಕ್ಕೆ ಕಾರ್ತಿಕ ದೀಪೋತ್ಸವ ಆಚರಿಸಲಾಗುವುದು.

## ನಗರದಲ್ಲಿ ನಾಳೆ ಶ್ರೀ ಚಾಮುಂಡೇಶ್ವರಿ ದೇವಿಯ ಕಾರ್ತಿಕ ಮಹೋತ್ಸವ



ದಾವಣಗೆರೆ, ಡಿ. 15 - ನಗರದ ಪಿ.ಬಿ. ರಸ್ತೆ ನೀಲಮ್ಮನ ತೋಟದ ಶ್ರೀ ಚಾಮುಂಡೇಶ್ವರಿ ದೇವಿಯ ಕಾರ್ತಿಕ ಮಹೋತ್ಸವವು ನಾಡಿದ್ದು ದಿನಾಂಕ 17ರ ಶುಕ್ರವಾರ ಸಂಜೆ 7 ಗಂಟೆಗೆ ನಡೆಯಲಿದೆ. ಅಂದು ಮಧ್ಯಾಹ್ನ 12.30ಕ್ಕೆ ಅನ್ನ ಸಂತರ್ಪಣೆ ಏರ್ಪಡಿಸಲಾಗಿದೆ.

## ಆಂಜನೇಯ ಬಡಾವಣೆ ನಾಗರಿಕ ಹಿತರಕ್ಷಣಾ ಸಮಿತಿ ಅಧ್ಯಕ್ಷರಾಗಿ ಕುಸುಮ ಲೋಕೇಶ್






ದಾವಣಗೆರೆ, ಡಿ. 15- ನಗರದ ಆಂಜನೇಯ ಬಡಾವಣೆ ನಾಗರಿಕ ಹಿತರಕ್ಷಣಾ ಸಮಿತಿ ಅಧ್ಯಕ್ಷರಾಗಿ ಕುಸುಮ ಲೋಕೇಶ್, ಕಾರ್ಯದರ್ಶಿಯಾಗಿ ಕೆ.ಆರ್. ವಸಂತ ಅವರು ಆಯ್ಕೆಯಾಗಿದ್ದಾರೆ.

ಮೊನ್ನೆ ನಡೆದ ಹಿತರಕ್ಷಣಾ ಸಮಿತಿಯ ಸರ್ವ ಸದಸ್ಯರ ಸಾಮಾನ್ಯ ಸಭೆಯಲ್ಲಿ ನೂತನ ಕಾರ್ಯಕಾರಿ ಸಮಿತಿ ರಚಿಸಲಾಯಿತು.

ಗೌರವಾಧ್ಯಕ್ಷರಾಗಿ ಕೆ.ಎಸ್. ಈಶ್ವರಪ್ಪ, ಗೌರವ ಸಲಹೆಗಾರರಾಗಿ ಎಸ್.ಬಿ. ರುದ್ರೇಗೌಡ, ಉಪಾಧ್ಯಕ್ಷರಾಗಿ ಕೆ.ಎಂ. ಗುರುಬಸವರಾಜ್, ಖಜಾಂಚಿಯಾಗಿ ಎಂ.ಹೆಚ್. ರಂಗಪ್ಪ, ಜಂಟಿ ಕಾರ್ಯದರ್ಶಿಯಾಗಿ ಗಿರೀಶ್ ಹತ್ತಿಕಾಳು, ನಿರ್ದೇಶಕರುಗಳಾಗಿ ಕಾಂತಯ್ಯ, ವೆಂಕಟೇಶ್ವರ, ಮಲ್ಲನಗೌಡ, ಬಸವರಾಜ್, ನಾಗರಾಜ್, ಕೆ.ಎಂ. ರವೀಂದ್ರನಾಥ, ಶಿವಶಂಕರಸ್ವಾಮಿ, ಚಂದ್ರಪ್ಪ, ಮಹೇಶ್, ಲೋಕೇಶ್, ಶ್ರೀಮತಿ ಸುಮಾ ಆಯ್ಕೆಯಾಗಿದ್ದಾರೆ.

## ಹರಿಹರ : ಪೊಲೀಸ್ ಲಾಠಿಚಾರ್ಜ್ ವಿರುದ್ಧ ಪಿ.ಎಫ್.ಐ. ಪ್ರತಿಭಟನೆ

ಹರಿಹರ, ಡಿ.15- ಅಮಾಯಕರ ಬಿಡುಗಡೆಗೆ ಆಗ್ರಹಿಸಿ, ಶಾಂತಿಯುತ ಪ್ರತಿಭಟನೆ ವೇಳೆ ಉಪ್ಪಿನಂಗಡಿ ಪೊಲೀಸರು ಲಾಠಿ ಚಾರ್ಜ್ ಮಾಡಿದ್ದಾರೆ ಎಂದು ಆರೋಪಿಸಿರುವ ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ, ಬಂಧಿತರ ಬಿಡುಗಡೆ ಮಾಡುವಂತೆ ಪ್ರತಿಭಟನೆ ನಡೆಸಿ ತಹಶೀಲ್ದಾರ್‌ಗೆ ಮನವಿ ಸಲ್ಲಿಸಿದೆ.

ಈ ವೇಳೆ ಮಾತನಾಡಿದ ಮುಖಂಡರು, ಸಂಘ ಪರಿವಾರದ ಏಜೆಂಟರಾಗಿ ಪೊಲೀಸರು ಕರ್ತವ್ಯವನ್ನು ಮಾಡಬೇಡಿ, ಅಧಿಕಾರ ಬಳಕೆ ಮಾಡಿಕೊಂಡು ಅಮಾಯಕರ ಮೇಲೆ ದೌರ್ಜನ್ಯ ಮಾಡುವುದು ಸರಿಯಾದ ಬೆಳವಣಿಗೆಯಲ್ಲ ಎಂದಿದ್ದಾರೆ.

ಈ ಸಂದರ್ಭದಲ್ಲಿ ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ ಸಂಘಟನೆಯ ತಾಲ್ಲೂಕು ಅಧ್ಯಕ್ಷ ಅಜರ್, ಸುಭಾನ್, ಸಮಿವುಲ್ಲಾ, ಜಬಿ, ನಿಜಾಮ್, ರಿಯಾಜ್, ಯೂಸುಫ್, ಆಸೀಫ್, ಶಫಿವುಲ್ಲಾ, ಮಹಮ್ಮದ್ ಸಮಿ ಮತ್ತಿತರರು ಉಪಸ್ಥಿತರಿದ್ದರು.

## ಡಿಜಿಟಲ್ ವಹಿವಾಟಿಗೆ ಉತ್ತೇಜನ ನೀಡಲು 1,300 ಕೋಟಿ ರೂ.

ನವದೆಹಲಿ, ಡಿ. 15 - ಯು.ಪಿ.ಐ. ಹಾಗೂ ರುಪೇ ಡೆಬಿಟ್ ಕಾರ್ಡ್‌ಗಳ ರೀತಿಯ ವಹಿವಾಟಿಗೆ ಉತ್ತೇಜನ ನೀಡುವ 1,300 ಕೋಟಿ ರೂ.ಗಳ ಯೋಜನೆಗೆ ಕೇಂದ್ರ ಸಂಪುಟ ಒಪ್ಪಿಗೆ ನೀಡಿದೆ.

ಈ ಬಗ್ಗೆ ವಿವರ ನೀಡಿರುವ ಎಲೆಕ್ಟ್ರಾನಿಕ್ಸ್ ಹಾಗೂ ಐ.ಟಿ. ಸಚಿವ ಅಶ್ವಿನಿ ವೈಷ್ಣವ್, ವ್ಯಕ್ತಿಗಳು ಮಾಡುವ ಡಿಜಿಟಲ್ ಪಾವತಿಗಾಗಿ ವರ್ತಕರಿಗೆ ವಿನಾಯಿತಿ ನೀಡಲಾಗುವುದು ಎಂದು ಹೇಳಿದರು. ಮುಂದಿನ ವರ್ಷದಲ್ಲಿ ಸರ್ಕಾರ ಡಿಜಿಟಲ್ ಪಾವತಿಗೆ ವಿನಾಯಿತಿ ನೀಡಲು 1,300 ಕೋಟಿ ರೂ. ಬಳಕೆ ಮಾಡಲಿದೆ.

## ಹರಪನಹಳ್ಳಿಯಲ್ಲಿ ಪದ್ಮಶ್ರೀ ಪುರಸ್ಕೃತೆ ಮಂಜಮ್ಮ ಜೋಗತಿಗೆ ಸನ್ಮಾನ



ಹರಪನಹಳ್ಳಿ, ಡಿ. 15- ಪಟ್ಟಣದ ನ್ಯಾಯಾಲಯದ ಆವರಣದಲ್ಲಿ ಕಾನೂನು ಸೇವಾ ಸಮಿತಿ, ವಕೀಲರ ಸಂಘದ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಂಡಿದ್ದ ಮಾನವ ಹಕ್ಕುಗಳ ದಿನಾಚರಣೆ ಕಾರ್ಯಕ್ರಮದಲ್ಲಿ ಜಾನಪದ ಅಕಾಡೆಮಿ ಅಧ್ಯಕ್ಷೆ, ಕೇಂದ್ರ ಸರ್ಕಾರದ ಪದ್ಮಶ್ರೀ ಪ್ರಶಸ್ತಿ ಪುರಸ್ಕೃತೆ ಮಂಜಮ್ಮ ಜೋಗತಿಯವರನ್ನು ತಾಲ್ಲೂಕು ವಾಲ್ಮೀಕಿ ನಾಯಕ ಸಮಾಜದಿಂದ ಸನ್ಮಾನಿಸಲಾಯಿತು.

ಈ ವೇಳೆ ಹಿರಿಯ ಸಿವಿಲ್ ನ್ಯಾಯಾಧೀಶರಾದ ಎಂ. ಭಾರತಿ ಸಿವಿಲ್, ಕಿರಿಯ ನ್ಯಾಯಾಧೀಶರಾದ ಪಕ್ಕೀರವ್ವ ಕೆಳಗೇರಿ, ಸಹಾಯಕ ಸರ್ಕಾರಿ ಅಭಿಯೋಜಕರಾದ ಎನ್ .ಮೀನಾಕ್ಷಿ, ಡಿ. ನಿರ್ಮಲ, ಅಪರ ಸರ್ಕಾರಿ ವಕೀಲ ವಿ.ಜಿ. ಪ್ರಕಾಶ್ ಗೌಡ, ವಕೀಲರ ಸಂಘದ ಅಧ್ಯಕ್ಷ ಕೆ. ಚೆಂದ್ರೇಗೌಡ, ವಾಲ್ಮೀಕಿ ನಾಯಕ ಸಮಾಜದ ಅಧ್ಯಕ್ಷ ಕೆ. ಉಚ್ಚೆಂಗೆಪ್ಪ, ಕಾರ್ಯದರ್ಶಿ ಗಿರಜ್ಜಿ ನಾಗರಾಜ್, ವಕೀಲರುಗಳಾದ ಕೋಡಿಹಳ್ಳಿ ಪ್ರಕಾಶ್, ಕೆ. ಲಿಂಗಾನಂದ, ಕೆ. ದ್ರಾಕ್ಷಾಯಿಣಿ, ಡಿ. ಹನುಮಂತಪ್ಪ, ಉಚ್ಚಂಗಿದುರ್ಗದ ನಾಗೇಂದ್ರಪ್ಪ, ಮುಖಂಡ ಅಲಮರಸಿಕೇರಿ ಟಿ.ಬಿ. ರಾಜು ಸೇರಿದಂತೆ ಇತರರು ಉಪಸ್ಥಿತರಿದ್ದರು.

# ಉದ್ಯೋಗಾವಕಾಶಕ್ಕೆ ನೂತನ ರಾಷ್ಟ್ರೀಯ ಶಿಕ್ಷಣ ನೀತಿ: ಪ್ರೊ. ಹಲಸೆ



ದಾವಣಗೆರೆ, ಡಿ.15- ದೇಶದ ಪ್ರಗತಿ ಹಾಗೂ ಉದ್ಯೋಗಾವಕಾಶಗಳನ್ನು ಹೆಚ್ಚಿಸುವ ಉದ್ದೇಶದಿಂದ ನೂತನ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಅನುಷ್ಠಾನಗೊಳಿಸಲಾಗಿದೆ ಎಂದು ದಾವಣಗೆರೆ ವಿವಿ ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ ಹೇಳಿದರು.

ನಗರದ ಎ.ಆರ್.ಜಿ. ಕಲಾ ಮತ್ತು ವಾಣಿಜ್ಯ ಕಾಲೇಜಿನಲ್ಲಿ ಇಂದು ಏರ್ಪಾಡಾಗಿದ್ದ ರಾಷ್ಟ್ರೀಯ ಶಿಕ್ಷಣ ನೀತಿ-2020 ಆಧಾರಿತ ಇತಿಹಾಸ ಪದವಿ ಪಠ್ಯಕ್ರಮ ಕಾರ್ಯಾಗಾರ, ಇತಿಹಾಸ ಪಠ್ಯಪುಸ್ತಕ ಬಿಡುಗಡೆ, ಕ್ರೀಡಾ, ಸಾಂಸ್ಕೃತಿಕ, ಯುವರೆಡ್ ಕ್ರಾಸ್, ಎನ್.ಎಸ್.ಎಸ್., ಎನ್.ಸಿ.ಸಿ. ಚಟುವಟಿಕೆಗಳ ಉದ್ಘಾಟನಾ ಸಮಾರಂಭದಲ್ಲಿ ಅವರು ಮಾತನಾಡಿದರು.

ವಿದ್ಯಾರ್ಥಿಗಳು ಸ್ಥಳೀಯ ಇತಿಹಾಸ ತಿಳಿದಿರಬೇಕು. ಸ್ಥಳೀಯ ಯಶಸ್ವೀ ವ್ಯಕ್ತಿಗಳ ಇತಿಹಾಸ ಮಕ್ಕಳಿಗೆ ಪ್ರೇರಣೆ ನೀಡುತ್ತದೆ. ಸರ್ವಪಲ್ಲಿ ರಾಧಾಕೃಷ್ಣನ್ ಅವರು ನನ್ನ ಆದರ್ಶ ವ್ಯಕ್ತಿಯಾಗಿದ್ದರು. ಅಂತವರ ಛಲ ವಿದ್ಯಾರ್ಥಿಗಳಲ್ಲೂ ಬರಬೇಕು ಎಂದು ಸಲಹೆ ನೀಡಿದರು.

ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಬಾಪೂಜಿ ವಿದ್ಯಾಸಂಸ್ಥೆಯ ಶೈಕ್ಷಣಿಕ ನಿರ್ದೇಶಕ ಡಾ.ಎಂ.ಜಿ. ಈಶ್ವರಪ್ಪ ಮಾತನಾಡಿ, ಅಧ್ಯಯನ, ಅಧ್ಯಾಪನ ಹಾಗೂ ಸಂಶೋಧನೆ ಈ ಮೂರರಲ್ಲೂ ತೊಡಗಿಸಿಕೊಂಡವನು ಮಾತ್ರ ಅತ್ಯುತ್ತಮ ಶಿಕ್ಷಕನಾಗಲು ಸಾಧ್ಯ ಎಂದು ಹೇಳಿದರು.

ಶಿಕ್ಷಕ ತನ್ನ ವೃತ್ತಿಯಲ್ಲಿ ಏನು ಕೆಲಸ ಮಾಡಿದ್ದಾನೆ ಎಂಬುದನ್ನು ತಿಳಿಸುವುದು ತಾನು ಬರೆದ ಪುಸ್ತಕಗಳಿರುವ ಗ್ರಂಥಾಲಯ ಹಾಗೂ ತನ್ನ ವಿದ್ಯಾರ್ಥಿಗಳು ಮಾತ್ರ ಎಂದರು.

ನೂತನ ಶಿಕ್ಷಣ ನೀತಿ ಕುರಿತು ಮಾತನಾಡಿದ ಅವರು, ಹೊಸದು ಬರುತ್ತಿರಬೇಕು. ಅದನ್ನು ನಾವು ಸ್ವಾಗತಿಸಬೇಕು. ಹೊಸದಲ್ಲಿರುವ ಶ್ರೇಷ್ಠತೆ ಹಾಗೂ ಕನಿಷ್ಠತೆಗಳನ್ನು ಗುರುತಿಸಬೇಕು. ಹೊಸದು ಎಂದಾಕ್ಷಣ ಎಲ್ಲವೂ ಶ್ರೇಷ್ಠವಲ್ಲ ಎಂದು ಹೇಳಿದರು.

ಇತಿಹಾಸ ಎನ್ನುವುದು ನಮಗೆ ಪಾಠವಾಗಬೇಕು. ಎಲ್ಲಾ ಜನರ ಜೀವನ ಚರಿತ್ರೆ ಬರೆಯುವುದೇ ಇತಿಹಾಸ. ಇತಿಹಾಸವನ್ನು ಯಾರಾದರೂ ರಚಿಸಬಹುದು. ಆದರೆ ಬರೆಯುವುದು ಸುಲಭದ ಕೆಲಸವಲ್ಲ ಎಂದ ಈಶ್ವರಪ್ಪ, ಪರೀಕ್ಷೆಗೆ ಸನ್ನದ್ಧರಾಗಿ ಬಂದರೆ ಮಾತ್ರ ಮೂರು ತಾಸು ಪರೀಕ್ಷೆ ಸುಲಲಿತವಾಗಿ ಬರೆಯಲು ಸಾಧ್ಯ. ಅಂತಹ ಕ್ರಿಯಾತ್ಮಕ ಶಕ್ತಿಯನ್ನು ಪಡೆಯಲೆಂದೇ ಹೊಸ ಶಿಕ್ಷಣ ನೀತಿ ತರಲಾಗುತ್ತಿದೆ ಎಂದು ಹೇಳಿದರು.

ಪ್ರಾಂಶುಪಾಲ ಪ್ರೊ.ಕೆ.ಎಸ್. ಬಸವರಾಜಪ್ಪ ಅಧ್ಯಕ್ಷತೆ ವಹಿಸಿದ್ದರು. ಸಹ ಪ್ರಾಧ್ಯಾಪಕ ಪ್ರೊ.ಮಲ್ಲಿಕಾರ್ಜುನ ಆರ್. ಹಲಸಂಗಿ ಸ್ವಾಗತಿಸಿದರು.

ಹಿರಿಯ ಪತ್ರಕರ್ತ ಎನ್. ವಿಶಾಖ್, ಪ್ರೊ.ಜೆ. ಅನಿತಾಕುಮಾರಿ, ದಾವಿವಿ ಇತಿಹಾಸ ಅಧ್ಯಯನ ಮಂಡಳಿ ಅಧ್ಯಕ್ಷ ಡಾ.ವೆಂಕಟರಾವ್ ಎಂ.ಪಾಲಟೆ, ದಾವಿವಿ ಇತಿಹಾಸ ಅಧ್ಯಾಪಕರ ವೇದಿಕೆ ಅಧ್ಯಕ್ಷ ಡಾ.ಬಿ.ಪಿ. ಕುಮಾರ್, ಸಹ ಪ್ರಾಧ್ಯಾಪಕ ಡಾ.ಮಲ್ಲಿಕಾರ್ಜುನ ಜವಳಿ ಉಪಸ್ಥಿತರಿದ್ದರು.

### ಅರ್ಧ ಇಡ್ಲಿ ತಿಂದು ಉಪ್ಪಿಟ್ಟು ಬೇಕೆನ್ನುವುದು ಸರಿಯೇ ?

'ಒಂದು ಹೋಟೆಲ್‌ಗೆ ಹೋಗಿ ಇಡ್ಲಿ ಆರ್ಡರ್ ಮಾಡಿ ಅರ್ಧ ತಿಂದಾದ ನಂತರ ನನಗೆ ಇದು ಬೇಡ ಉಪ್ಪಿಟ್ಟು ಬೇಕು' ಎಂಬುದು ಸರಿಯಲ್ಲ. ಹಾಗೆಯೇ ನೂತನ ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ 'ಮಲ್ಟಿಪಲ್ ಎಂಟ್ರಿ ಹಾಗೂ ಎಕ್ಸಿಟ್ ಸಿಸ್ಟಮ್'ನಡಿ ಒಂದು ವರ್ಷ ಒಂದು ವಿಷಯ ಕಲಿತು ಮತ್ತೆ ಬೇರೆ ವಿಷಯ ಆಯ್ಕೆ ಮಾಡಿಕೊಳ್ಳುವುದರಿಂದ ಸಮಯ ವ್ಯರ್ಥ ಎಂದು ಡಾ.ಎಂ.ಜಿ. ಈಶ್ವರಪ್ಪ ಹೇಳಿದರು.

ವಿದ್ಯಾರ್ಥಿಗಳು ಶಿಕ್ಷಣ ಕಲಿಯಲು ಬರಬೇಕು. ಕೊಠಡಿಯಲ್ಲಿರಬೇಕು. ಕಲಿಯಬೇಕು. ಶಿಕ್ಷಣ ಮುಗಿಸಿ ಹೊರ ಹೋಗಬೇಕು ಎಂಬುದು ಗುರುಕುಲ ಶಿಕ್ಷಣ ಪದ್ಧತಿ ಎಂದರು.

ಎಸ್ಸೆಸ್ಸೆಲ್ಸಿ ಅವಧಿಯಲ್ಲಿಯೇ ವಿದ್ಯಾರ್ಥಿಗೆ ತನ್ನ ಅಭಿರುಚಿಗೆ ತಕ್ಕ ಕ್ಷೇತ್ರವನ್ನು ಆಯ್ಕೆ ಮಾಡಿಕೊಳ್ಳಬೇಕು. ಒಂದು ವೇಳೆ ಬದಲಾವಣೆ ಮಾಡಿಕೊಳ್ಳಬೇಕಾದರೆ ತಕ್ಷಣ ಮಾಡಿಕೊಳ್ಳಬೇಕು. ಒಂದು ವರ್ಷ ವ್ಯರ್ಥ ಮಾಡಿ ಬದಲಾಗುವುದಲ್ಲ. ಸಮಯ ಅಮೂಲ್ಯವಾದದ್ದು ಎಂದು ಈಶ್ವರಪ್ಪ ಹೇಳಿದರು.

**'History' ಎನ್ನುವುದು ಕೇವಲ 'His' Story ಯಾಗಿದೆ. 'His' Story ಜೊತೆ 'Her' ಸ್ಟೋರಿಯೂ ಬಂದರೆ ಸಮಾನತೆ ಸಾಧಿಸಿದಂತಾಗುತ್ತದೆ. ಆದ್ದರಿಂದ ಸಮಾನತೆಯ ಸಮ ಸಮಾಜ ನಿರ್ಮಾಣಕ್ಕೆ ಯುವಕ-ಯುವತಿಯರು ಮುಂದಾಗಬೇಕು ಎಂದು ಡಾ.ಎಂ.ಜಿ. ಈಶ್ವರಪ್ಪ ಕರೆ ನೀಡಿದರು.**

## ಹುಟ್ಟುಹಬ್ಬ ಆಚರಿಸದಂತೆ ಹೆಚ್‌ಡಿಕೆ ಕರೆ



ಬೆಂಗಳೂರು, ಡಿ. 15 - ಮಾಜಿ ಸಿಎಂ ಹೆಚ್.ಡಿ.ಕುಮಾರಸ್ವಾಮಿ ಅವರು ಈ ವರ್ಷ ಜನ್ಮದಿನ ಆಚರಿಸಿಕೊಳ್ಳದಿರಲು ನಿರ್ಧರಿಸಿದ್ದಾರೆ. ಕೋವಿಡ್ ಹಿನ್ನೆಲೆಯಲ್ಲಿ ಜನರು ಸಂಕಷ್ಟಕ್ಕೆ ಸಿಲುಕಿದ್ದು, ಮಳೆ-ನೆರೆ ವಿಕೋಪಗಳಿಂದ ತತ್ತರಿಸಿದ್ದಾರೆ. ಹೀಗಾಗಿ ನಾಳೆ ಗುರುವಾರ ವಿಜೃಂಭಣೆಯಿಂದ ನನ್ನ ಹುಟ್ಟುಹಬ್ಬ ಮಾಡುವುದು ಬೇಡ ಎಂದು ಅವರು ಟ್ವೀಟ್ ಮಾಡಿದ್ದಾರೆ.


### ಪ್ರಥಮ ವರ್ಷದ ಪುಣ್ಯಸ್ಮರಣೆ



ದಿ|| ಶ್ರೀ ಎಸ್.ಹೆಚ್. ವಿಜಯ ಕುಮಾರ್, KAS

ನಿವೃತ್ತ ಅಪರ ಜಿಲ್ಲಾಧಿಕಾರಿಗಳು, ದಾವಣಗೆರೆ.

ನೀವು ನಮ್ಮನ್ನಗಲಿ ಇಂದಿಗೆ ಒಂದು ವರ್ಷವಾಯಿತು.
ಸದಾ ನಿಮ್ಮ ಸ್ಮರಣೆಯಲ್ಲಿರುವ

ಮೃತರ ಧರ್ಮಪತ್ನಿ: ಶ್ರೀಮತಿ ಸುಶೀಲಮ್ಮ, ಮಕ್ಕಳು, ಸಿದ್ದಣ್ಣರ ವಂಶಸ್ಥರು ಹಾಗೂ ಬಂಧು-ಮಿತ್ರರು, ಮಳಲಕೆರೆ.


JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte